# ಹಿಂದು ವಾಣಿ

ಸಂಪುಟ – 22
ಸಂಚಿಕೆ – 08
ಪುಷ್ಯ–ಮಾಘ
ಫೆಬ್ರವರಿ 2024
ಬೆಲೆ ರೂ. 15.00

HINDU VANI
KANNADA MONTHLY

VOL - 22 ISSUE-08 FEBRUARY 2024 BENGALURU PAGES-44 Rs:15/-





ಹಿಂದುವಾಣಿ

hinduvani@yahoo.com

ಶ್ರೀ ಶೋಭಕೃತು ಸಂವತ್ಸರ
ಪುಷ್ಯ–ಮಾಘ

ಫೆಬ್ರವರಿ 2024

ಗೌರವ ಸಂಪಾದಕ

ಟಿ.ಎ.ಪಿ. ಶೆಣೈ

ಪ್ರಕಾಶಕರು

ಎನ್.ಪಿ. ಮುನಿರಾಜು
ವಿಶ್ವ ಹಿಂದು ಪರಿಷದ್, ಕರ್ನಾಟಕ
'ಧರ್ಮಶ್ರೀ', 91 ಶಂಕರಪುರಂ
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು – 560 004.
ದೂ. 080–26604641

ಪ್ರಸಾರ ಸಲಹೆ

ಹೆಚ್.ಎಸ್. ಸೀತಾರಾಮು
ರಮೇಶ ಡಿ.
ಶಿವಕುಮಾರ ಮೇಲ್ನಾಡ್
ಶಿವಕುಮಾರ ಬೋಳ್‌ಶೆಟ್ಟಿ
ಎಸ್. ಜಯರಾಮ್

ಚಂದಾವಿವರ

| | |
|---|---|
| ಬಿಡಿಪ್ರತಿ | ರೂ. 15/– |
| ವಾರ್ಷಿಕ ಚಂದಾ | ರೂ. 130/– |
| ದ್ವೈವಾರ್ಷಿಕ ಚಂದಾ | ರೂ. 250/– |

ಮುದ್ರಕರು

ರಾಷ್ಟ್ರೋತ್ಥಾನ ಮುದ್ರಣಾಲಯ
ನಂ.8 & 8/1, ಸತ್ಯಪ್ರಮೋದತೀರ್ಥ ಬಿಲ್ಡಿಂಗ್
3ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ
ಚಾಮರಾಜಪೇಟೆ, ಬೆಂಗಳೂರು – 560 018.
rmudrana@gmail.com


ಸೂಕ್ತಿಶ್ರೀ

# ಕೋಪ ಮತ್ತು ಕ್ಷಮೆ

– ಬಿ.ಈ. ಸುರೇಶ, ಬೆಂಗಳೂರು

**ಯಃ ಸಮುತ್ಪತಿತಂ ಕ್ರೋಧಂ ಕ್ಷಮಯೈವ ನಿರಸ್ಯತಿ।**
**ಯಥೋರಗಸ್ತ್ವಚಂ ಜೀರ್ಣಾಂ ಸ ವೈ ಪುರುಷ ಉಚ್ಯತೇ॥**

– ವಾಲ್ಮೀಕಿ ರಾಮಾಯಣ, ಸುಂದರಕಾಂಡ, ಸರ್ಗ 55–6

ಯಾವನು ತನ್ನ ಹೃದಯಾಂತರಾಳದಿಂದ ಹುಟ್ಟಿಬಂದ ಕೆಟ್ಟ ಕೋಪವನ್ನು, ಹಾವು ತನ್ನ ಪೊರೆಯನ್ನು ಆಗಾಗ ಕಳಚಿಹಾಕುವಂತೆ; ಕ್ಷಮೆಯನ್ನಾಶ್ರಯಿಸಿ ಕೂಡಲೇ ತೊರೆಯುವನೋ ಅಂತಹವನೇ ಪುರುಷನೆನಿಸಿಕೊಳ್ಳುವನು!

ತಾನೇ ಬೆಂಕಿಯನ್ನು ಹಚ್ಚಿ ಸಂಪೂರ್ಣವಾಗಿ ಸುಟ್ಟ ಮೇಲೆ ಅದರಿಂದ ಭಯಗೊಂಡ ರಾಕ್ಷಸರಿಂದ ಕೂಡಿದ ಲಂಕಾ ಪಟ್ಟಣವನ್ನು ನೋಡಿ ಚಿಂತಿಸತೊಡಗಿದ ಹನುಮಂತನು ಅಂದುಕೊಂಡ ಮಾತಿದು. ಲಂಕೆಯೆಲ್ಲವೂ ಸಂಪೂರ್ಣವಾಗಿ ದಹಿಸಿ ಹೋಗಿರುವಾಗ ಸೀತೆಯೂ ಆ ಬೆಂಕಿಯಲ್ಲಿ ಸುಟ್ಟು ಹೋಗಿರಬಹುದು. ಇದರಿಂದಾಗಿ ರಾಮನ ಕಾರ್ಯಕ್ಕಾಗಿ ಬಂದ ನಾನೇ ಆ ಕೆಲಸವನ್ನು ಹಾಳು ಮಾಡಿದಂತಾಯಿತು ಎಂದು ತನ್ನನ್ನು ತಾನೇ ಹಳಿಯತೊಡಗಿದನು.

ತಾನುಮಾಡಿದ ಕೆಲಸಕ್ಕೆ ಸದುದ್ದೇಶವಿದ್ದರೆ ಸಾಲದು ಅದರ ಪರಿಣಾಮವು ಒಟ್ಟು ಲಾಭ ಕಾರವಾಗಿಲ್ಲವಾದರೆ ಏನು ಪ್ರಯೋಜನ? ಅಷ್ಟಲ್ಲದೆ ಉದ್ದೇಶಕ್ಕೇನೇ ಹಾನಿಕಾರಕವಾದರೆ ಏನು ಫಲ? ಸಜ್ಜನರಾದವರು ಆ ಎರಡನ್ನೂ ವಿಮರ್ಶಿಸಿ ಅವುಗಳ ಲಾಭಾಲಾಭಗಳನ್ನು ಚಿಂತಿಸಬೇಕು. ಸಿಟ್ಟು ಎಲ್ಲ ಅನರ್ಥಗಳಿಗೆ ಮೂಲವಾದುದು ಆದರೆ ಆ

ಸಿಟ್ಟನ್ನು ಬುದ್ಧಿಪೂರ್ವಕವಾಗಿ ತಡೆಯಬೇಕು. ಉರಿಯುತ್ತಿರುವ ಬೆಂಕಿಯನ್ನು ನೀರಿನಿಂದ ಆರಿಸುವಂತೆ ಹೃದಯದೊಳಗೆ ಉಕ್ಕಿ ಬರುವ ಆ ಕೋಪವನ್ನು ತಡೆಯುವವನು ಮಹಾತ್ಮನಾಗುವನು.

ಕೋಪದಿಂದ ಆಗುವ ಅನಾಹುತಗಳನ್ನೂ ಹನುಮಂತನು ಒಂದೊಂದಾಗಿ ನೆನಪಿಸಿಕೊಳ್ಳುತ್ತಾನೆ. ಸಿಟ್ಟು ಎಲ್ಲಾ ಪಾಪಗಳನ್ನು ಮಾಡಲು ಪ್ರಚೋದಿಸುತ್ತದೆ. ಕೋಪಿಷ್ಟನು ಕಾರ್ಯಾಕಾರ್ಯಗಳ ವಿವೇಚನೆಯೇ ಇಲ್ಲದೆ ಗುರುಜನರನ್ನೂ ಬೇಕಾದರೆ ಸಂಹರಿಸಬಲ್ಲನು. 'ಕ್ರುದ್ಧ: ಪುರುಷಯಾ ವಾಚಾ ನರ: ಸಾಧೂನಧಿಕ್ಷಿಪೇತ್' ಅವನು ಸತ್ಪುರುಷರನ್ನೂ ಕ್ರೂರವಾದ ಮಾತುಗಳಿಂದ ಹೀಯಾಳಿಸುತ್ತಾನೆ. ಕೋಪಗೊಂಡವನಿಗೆ ಯಾವ ಮಾತನ್ನು ಹೇಳಬೇಕು; ಯಾವ ಮಾತುಗಳನ್ನು ಆಡಬಾರದು ಎನ್ನುವ ಪರಿಜ್ಞಾನವಿರುವುದಿಲ್ಲ. ಅವನು ಮಾಡಬಾರದು ಎನ್ನುವ ಕಾರ್ಯವಿಲ್ಲ. ಆಡಬಾರದು ಎನ್ನುವ ಮಾತಿಲ್ಲ. ಮಾಡಬಾರದುದನ್ನು ಮಾಡುತ್ತಾನೆ. ಆಡಬಾರದು ಎನ್ನುವುದನ್ನು ಆಡುತ್ತಾನೆ.

ಹಾಗಾಗಿ ಹನುಮಂತನು ಕೋಪವನ್ನು ಅಡಗಿಸುವ ರೀತಿಯನ್ನೂ ಯೋಚಿಸುತ್ತಾನೆ.

ಕೋಪವೇನೋ ಭಾವನೆಗಳ ತುಮಲದಿಂದ ಹುಟ್ಟುತ್ತದೆ. ಆದರೆ ಅದನ್ನು ಬುದ್ಧಿ ಪೂರ್ವಕವಾಗಿ ತಡೆದುಕೊಳ್ಳಬೇಕು. ಅದಕ್ಕೆ ಉತ್ತಮವಾದ ಹೋಲಿಕೆಯೆಂದರೆ ಹಾವು ಆಗಾಗ್ಗೆ ತನ್ನ ಹಳೆಯ ಚರ್ಮವನ್ನು ತನ್ನ ಮೈಯಿಂದ ಕಳಚಿಕೊಂಡು ಬಿಡುತ್ತದೆ. ಅದನ್ನು ಪೊರೆ ಕಳಚಿಕೊಳ್ಳುವುದು ಎನ್ನುತ್ತಾರೆ. ಹಾಗೆ ಪೊರೆ ಕಳಚಿಕೊಂಡಾಗ ಹೊಸ ಚರ್ಮದಿಂದ ಆ ಹಾವು ಹೊಸ ಹಾವಿನಂತೆ ಕಾಣುತ್ತದೆ. ಅದೇರೀತಿ ಕೋಪದಲ್ಲಿ ಕುದಿಯುವ ಮನುಷ್ಯನು ಕ್ಷಮೆಯನ್ನು ತಳೆದುಕೊಂಡರೆ ಅವನು ಉತ್ತಮನೂ ಸಜ್ಜನನೂ ಆಗಿ ಕಾಣಿಸಿಕೊಂಡು ತನ್ನ ವ್ಯಕ್ತಿತ್ವವನ್ನೇ ಬದಲಿಸಿಕೊಂಡಂತಾಗುವನು.

ಕೋಪಕ್ಕೆ ಈಡಾದವನು ಮಾಡುವ ಅಕಾರ್ಯದಿಂದ ಕೊನೆಯಲ್ಲಿ ಆತನೇ ಪಶ್ಚಾತ್ತಾಪಕ್ಕೀಡಾಗುತ್ತಾನೆ. ಇಲ್ಲಿ ಹನುಮಂತನು ಅದೇ ರೀತಿ ದುಃಖಕ್ಕೆ ಬಲಿಯಾಗಿ ಆತ್ಮಹತ್ಯೆಯನ್ನು ಮಾಡಿ ಪ್ರಾಣ ತ್ಯಜಿಸಿಕೊಳ್ಳಬೇಕೆಂದು ಕೊಳ್ಳುವನು. ಅದಕ್ಕಾಗಿ ಬೆಂಕಿಯಲ್ಲಿ ಬೀಳಲೇ? ಸಮುದ್ರದ ಬಡಬಾಗ್ನಿಯಲ್ಲಿ ಬಿದ್ದು ಪ್ರಾಣ ಬಿಡಲೇ? ಸಮುದ್ರಕ್ಕೆ ಹಾರಿ ಶರೀರವನ್ನು ಸಮುದ್ರ ಪ್ರಾಣಿಗಳಿಗೆ ತಿನ್ನಲು ಬಿಡಲೇ ಎಂದುಕೊಳ್ಳುತ್ತಾನೆ. ಜ್ಞಾನಿಯಾದ ಹನುಮಂತನೇ ಕೋಪಕ್ಕೆ ಈಡಾಗಿ ಈ ಮಟ್ಟದ ನೋವನ್ನು ಅನುಭವಿಸುವುದಾದರೆ ಸಾಮಾನ್ಯರ ಕೋಪದ ಪರಿಣಾಮವು ಏನಾಗಬಹುದು?

■

ವಿಶ್ವ ಹಿಂದು ಪರಿಷದ್ ಮಾಹಿತಿ ಮತ್ತು ಹಿಂದುವಾಣಿ epaper
www.vhp.org




**ಮುಖಪುಟ**
**ಅಯೋಧ್ಯೆಯ ಬಾಲರಾಮ**

## ಎಂದಿನಂತೆ


3 **ಸೂಕ್ತಿಶ್ರೀ**
ಕೋಪ ಮತ್ತು ಕ್ಷಮೆ

6 **ಪ್ರತಿಧ್ವನಿ**

7 **ಸಂಪಾದಕೀಯ**
ಈಗಿನ್ನು ಶಾಶ್ವತ ನಿರ್ಮಾಣದ ಪ್ರಕ್ರಿಯೆ

27 **ಕವನ**
ನಾವು ಭಾರತೀಯರು

28 **ನಿಮಗೆಷ್ಟು ಗೊತ್ತು?**

30 **ಶಬ್ದಶೋಧ 194**

32 **ಕತೆ ಕತೆ ಕಾರಣ**
ರಾಮಕಾರ್ಯಕ್ಕೆ ತಡೆ ಇಲ್ಲ

34 **ಕ್ಷೇತ್ರದರ್ಶನ**
ಶ್ರೀರಾಮಲಿಂಗೇಶ್ವರ ಸ್ವಾಮಿ

38 **ಪ್ರಸ್ತುತ**
ರಾಮ ಬಂದ ನಮ್ಮ ರಾಮ ಬಂದ


## ತಿಂಗಳ ವಿಶೇಷ


09 ಮನಸ್ಸು ಹೃದಯ ರಾಮಮಯ

11 ಮುಜರಾಯಿ ದೇವಸ್ಥಾನಗಳು


13 ಮಂತ್ರಾಕ್ಷತೆ ಸ್ವೀಕರಿಸಿರಿ

16 ಅದು ಮಂದಿರವಾಗಿತ್ತು

19 ಕ್ರೈಸ್ತರಲ್ಲಿ ಕಾಣುವ ಅಸಮಾನತೆ

22 ಮೌನ ತಪಸ್ವಿ ಚಂದ್ರಶೇಖರಯ್ಯ

23 ಧರ್ಮ ರಕ್ಷಣೆಗಾಗಿ ಶಕ್ತಿಯುಕ್ತಿ




## ರಾಮಮಯವಾಯಿತು ಹಿಂದುವಾಣಿ

ಶ್ರೀರಾಮ ಅಯೋಧ್ಯೆಯ ತನ್ನ ಅರಮನೆಗೆ ಬರುತ್ತಿದ್ದಂತೆ ಹಿಂದು ವಾಣಿಯು ರಾಮಮಯವಾದುದು ಸ್ವಾಗತಾರ್ಹ. ಎಲ್ಲವೂ ಉತ್ತಮ ಲೇಖನಗಳೇ. ಅದರಲ್ಲೂ ಶಬ್ದಶೋಧಕ್ಕಾಗಿ ರಚಯಿತರು ಪಟ್ಟಶ್ರಮವು ಮೆಚ್ಚುವಂತಹದು.

– **ಹರಿಣಿ,** ದೊಡ್ಡಗುಬ್ಬಿ

## ಸಂಪಾದಕೀಯದ ಇತಿಹಾಸ ಪಾಠ

ಹಲವು ಸಾರಿ ಬಿದ್ದರೂ ಸೋಲೊಪ್ಪದ ಮತ್ತೆ ಕಾದಾಡುವ ಭಾರತದ ಸಂಕೇತವಾಗಿ ಸೋಮನಾಥವನ್ನು ಆರಿಸಿದುದು ಪ್ರಸ್ತುತವಾಗಿದೆ. ಇನ್ನೆಂದೂ ಸೋಲಿಲ್ಲದ ಅಧ್ಯಾಯವೀಗ ಪ್ರಾರಂಭವಾಗಿದೆ. ಹೌದು, ಇನ್ನು ಗೆಲುವೇ ಗೆಲುವು.

– **ಪುಷ್ಪರಾಜ,** ಬೈಂದೂರು

## ರಾಮರಾಜ್ಯದ ಅಂಗಳ

ನಾವೇ ಅಯೋಧ್ಯೆಗೆ ಹೋಗಿ ನೋಡಿದಂತೆ ಲೇಖನವು ರಾಮಮಂದಿರದ ಇಂಚಿಂಚುಗಳನ್ನು ಪರಿಚಯಿಸಿದೆ. ಎಲ್ಲವೂ ಕಣ್ಣಿಗೆ ಕಟ್ಟಿದಂತೆ ವಿವರಿಸಿದೆ. ಪ್ರತಿಷ್ಠಾಪನೆಯ ದಿನದಂದು ಅವೇ ಚಿತ್ರಗಳನ್ನು ಪ್ರತ್ಯಕ್ಷ ನೋಡಿದುದಾಯಿತು. ಅದಕ್ಕೆ ಪೂರಕವಾಗಿತ್ತು ಹಿಂದುವಾಣಿಯ ಈ ಲೇಖನ. – **ಕುಸುಮಾರಾವ್,** ಅನಂತಪುರ

## ಘನತೆವೆತ್ತ ವೃತ್ತಿ ಪ್ರೀತಿ

'ಪ್ರಸ್ತುತ' ಅಂಕಣದ ಲೇಖನವು ಉತ್ತಮ ಮಾನವೀಯ ವಿಭಾಗದ ಲೇಖನ. ಎಲ್ಲವೂ ಘನಕಾರ್ಯಗಳೇ. ದೇಶದ ಅಭ್ಯುದಯಕ್ಕೆ ಒತ್ತು ಕೊಡುವ ಉದ್ಯೋಗಗಳೇ.

– **ಸುನಂದಾ,** ಮುಂಬಯಿ

## ಮುಖಪುಟದ ಸೆಳೆತ


ಮುಖಪುಟದ ಕಲ್ಪನೆ. ಗರ್ಭಗೃಹದಲ್ಲಿ ಕುಳಿತ ಕಾಲ್ಪನಿಕ ಬಾಲರಾಮ. ಎಲ್ಲವೂ ಸರ್ಜನಶೀಲ – **ಮುಕುಂದರಾವ್,** ಶಿವಮೊಗ್ಗಾ

ಸಂಪಾದಕೀಯ

# ಜಗದಾನಂದಕಾರಕ ಭಾರತ

ದೇಶವಿಡೀ ಒಂದಾಗಿ ಸಂಭ್ರಮಿಸಿದ ಪ್ರಸಂಗವನ್ನು ನಮ್ಮ ತಲೆಮಾರು ಮೊದಲ ಬಾರಿಗೆ ಅನುಭವಿಸಿದುದು ಪುಷ್ಯಶುದ್ಧ ದ್ವಾದಶಿಯ ಸೋಮವಾರದಂದು. ಅದು ಜನವರಿ 22. ಬಾಲರಾಮನು ಅಯೋಧ್ಯೆಯ ತನ್ನ ಅರಮನೆಗೆ ಆಗಮಿಸಿ ಪ್ರತಿಷ್ಠಾಪನೆಗೊಂಡ ದಿನ. ಭಾರತದಲ್ಲಷ್ಟೇ ಅಲ್ಲ; ಜಗತ್ತಿನಾದ್ಯಂತ ಹಿಂದುಗಳ ಹಿಗ್ಗಿನ ಹೊಳೆ ತುಂಬಿಹರಿದ ದಿನ. ಇಷ್ಟು ವ್ಯಾಪಕವಾದ ಸಂತೋಷ ಇಷ್ಟೊಂದು ಅಪರಿಮಿತವಾದ ಆನಂದವನ್ನು ಹಿಂದುಗಳು ಈ ಕೆಲವು ಶತಮಾನಗಳಿಂದ ಕಂಡಿರಲೇ ಇಲ್ಲ. ಶಿವಾಜಿ ಮಹಾರಾಜನು ಪಟ್ಟಾಭಿಷಿಕ್ತನಾದ ದಿನ ದೂರದ ತಮ್ಮ ಆಶ್ರಮದಲ್ಲಿ ಸಮರ್ಥ ರಾಮದಾಸರು ಆನಂದ ಭುವನ ನಿರ್ಮಾಣವಾಯಿತು ಎಂದು ಮೈಮರೆತು ಕುಣಿದಾಡಿದರಂತೆ ಅದರಂತೆ ಇಂದು ಕೋಟ್ಯಾವಧಿ ಸಾಧು ಸಂತ, ಸಜ್ಜನ ಆಸ್ತಿಕ ಸಮರ್ಥರು ಆನಂದ ಬಾಷ್ಪಹರಿಸಿದ ದಿನವಿದು.

ಶ್ರೀರಾಮನು ಲೋಕಾಭಿರಾಮನಾದವನು. ಸ್ತೋತ್ರಗಳು ಅವನನ್ನು ಹಾಗೆಂದೇ ಸ್ತುತಿಸಿವೆ. ಈಗಂತೂ ಅದು ನಮ್ಮ ಕಣ್ಣೆದುರೇ ಕಂಡು ಅನುಭವಿಸಿದಂತಾಗಿದೆ. ಈವರೆಗೆ ನಾವು ನಮ್ಮ ಪೂರ್ವ ಸಂತಸೂರಿಗಳು ಶ್ರೀರಾಮನನ್ನು ಹಾಡಿ ಹೊಗಳಿದುದನ್ನೇ ಪುನರುಚ್ಚರಿಸುತ್ತಾ ಇದ್ದೆವು. ತ್ಯಾಗರಾಜರಿಗೆ ಅವನು 'ಜಗದಾನಂದಕಾರಕನು'. ಕಬೀರರು 'ರಾಮ ಚರಣ ಸುಖದಾಯಿ! ಶ್ರೀರಾಮನ ಜೊತೆಗಿರುವುದೇ ಸುಖಕರವೆಂದುಕೊಂಡರು. ನಮ್ಮ ದಾಸಶ್ರೇಷ್ಠರಿಗೆ ಅವನ ಹೆಸರೇ ಸವಿಪಾಯಸದಂತೆ, ಭದ್ರಾಚಲ ರಾಮದಾಸರಿಗೆ ಶ್ರೀರಾಮನೆಂದರೆ ಸ್ನೇಹದ ಸಲುಗೆ. ನಾನು ಕರೆಯುತ್ತಿದ್ದರೂ ಯಾಕಯ್ಯ ಉತ್ತರಿಸುತ್ತಿಲ್ಲ? ನಿನ್ನ ಮಾತಿಗೇನು ಬಂಗಾರದ ಬೆಲೆಯೇ? ಎಂದು ಗದರಿಸಿ ಕೇಳುವಷ್ಟು! ತುಲಸೀದಾರರಿಗೆ ಅವನು 'ಪರಮಕೃಪಾಳು ರಾಮಚಂದ್ರ' ಸಂತ ಮೀರಾಳಿಗೆ ಅವನೆಂದರೆ 'ಗುರುಗಳು ನೀಡಿದ ರತ್ನದಂತಹ ಸಂಪತ್ತು'. ಇಂತಹ ಲೋಕಪ್ರಿಯ ಸಜ್ಜನಸ್ನೇಹಿ ಶ್ರೀರಾಮಚಂದ್ರನು ಅಯೋಧ್ಯೆಗೆ ಬಂದನೆಂದರೆ ಆನಂದಿಸದೆ ಇರಲು ಸಾಧ್ಯವೇ?



ಅದೊಂದು ದಿನ ವಾಲ್ಮೀಕಿ ಮಹರ್ಷಿಗಳು ತಮ್ಮ ಆಶ್ರಮಕ್ಕೆ ಬಂದ ನಾರದರನ್ನು ಕುರಿತು 'ಇಂದಿನ ದಿನಗಳಲ್ಲಿ ಗುಣವಂತನೂ, ಶೂರನೂ, ಧರ್ಮವನ್ನು ಅರಿತು ನಡೆಯುವವನೂ, ಕೃತಜ್ಞತಾ ಭಾವದಿಂದ ಇರುವವನೂ, ಸತ್ಯವಂತನಾಗಿದ್ದು ದೃಢಚಿತ್ತದವನು. ಚಾರಿತ್ರ್ಯವಂತನೂ ಎಲ್ಲರಿಗೂ ಹಿತಕೋರುವವನೂ ಯಾರಿದ್ದಾರೆ ಹೇಳಿ' ಎಂದು ಕೇಳಿದ್ದರು. ನಾರದರು ಅದಕ್ಕೆ ಉತ್ತರಿಸುತ್ತಾ 'ಅಂಥವರು ಸಿಗುವುದು ಕಷ್ಟವೆ. ಆದರೂ ಒಬ್ಬನಿದ್ದಾನೆ ನೋಡಿ ಋಷಿಗಳೇ. ಅವನು ಬೇರೆಯಾರೂ ಅಲ್ಲ. ಎಲ್ಲರೂ ಪ್ರೀತಿಯಿಂದ ರಾಮಾರಾಮನೆಂದು ಕೆರಯುವ ಚಕ್ರವರ್ತಿ ರಾಮಚಂದ್ರನೇ ಅಂತಹ ಎಲ್ಲಾ ಗುಣಗಳನ್ನು ಹೊಂದಿದವನು' ಎಂದು ಹೇಳುತ್ತಾರೆ.

ಶ್ರೀರಾಮನು ಪ್ರಜೆಗಳ ಗೌರವಕ್ಕೆ ಪಾತ್ರನಾದುದು; ಎಲ್ಲರೂ ಆತನೇ ರಾಜನಾಗಿರಲಿ ಎಂದು ಬಯಸುತ್ತಿದ್ದುದು ಎಲ್ಲರನ್ನು ಕರೆದು ಮಾತನಾಡಿಸುವ ಅವನ ಸರಳತೆಯಿಂದ, ತನ್ನ ಶುದ್ಧ ಚಾರಿತ್ರ್ಯದಿಂದ, ಪ್ರೀತಿ ಪಾತ್ರನಾದುದು ಉಳಿದವರು ಸಂತೋಷದಿಂದಿರಲು ತಾನೊಬ್ಬನು ಕಷ್ಟಪಡಬೇಕು ಎಂದುಕೊಳ್ಳುತ್ತಿದ್ದುದರಿಂದ. ಪ್ರಸ್ತುತ ದಿನಗಳಲ್ಲೂ ಅವನು ಮಾದರಿಯೆನಿಸುವುದು ಅಂದು ಆತನು ಎಲ್ಲರನ್ನು ತನ್ನ ವಾತ್ಸಲ್ಯದ ತೆಕ್ಕೆಯೊಳಗೆ ಸೇರಿಸಿದುದರ ನೆನಪು ಇಂದಿಗೂ ಇರುವುದರಿಂದ. ದೃಷ್ಟಿಯಿಲ್ಲದ ಸೂರದಾಸರು ಶ್ರೀಕೃಷ್ಣನನ್ನು, 'ಈ ಕಣ್ಣುಗಳಿಂದ ನಿನ್ನನ್ನು ಕಾಣಲುಬಯಸುವೆ'. ಎಂದರು. ಭಗವಂತನು ಅವರಿಗೆ ದೃಷ್ಟಿಯನ್ನು ದಯಪಾಲಿಸಿದನು ಬಾಲಕೃಷ್ಣನ ಆ ಸುಂದರ ಮುಖದ, ಮನತುಂಬುವ ಮಂದಹಾಸವನ್ನು ಕಂಡ ಸೂರದಾಸರು 'ಸಾಕಿನ್ನು ನಿನ್ನನ್ನು ಕಣ್ಣಾರೆ ಕಂಡು ಅನುಭವಿಸಿದ ಆನಂದವನ್ನು ಮತ್ತೆಲ್ಲೂ ಕಾಣಲು ಬಯಸಲಾರೆ. ನನ್ನನ್ನು ಮತ್ತೆ ಕುರುಡನನ್ನಾಗಿಸು ದೇವಾ' ಎಂದು ಬೇಡಿಕೊಂಡರಂತೆ. ನಾವು ಅಯೋಧ್ಯೆಯ ಬಾಲರಾಮನ ಮಂದಹಾಸವನ್ನು ಕಂಡು ಪುಳಕಿತರಾದೆವೆಂದರೆ ನಮ್ಮ ಬಾಳು ಹಸನಾಗಿದೆ. ಈ ದೇವಭೂಮಿಗೆ ನಾವೀಗ ತಕ್ಕ ಭಕ್ತರಾದೆವು ಎಂದೇ ಅರ್ಥ.

ಜನ್ಮಭೂಮಿ ತೀರ್ಥಕ್ಷೇತ್ರದ ದೇವಸ್ಥಾನವನ್ನು ನಾವು ಮಂದಿರವೆಂದಷ್ಟೇ ಕಾಣಬಯಸಿದವರಲ್ಲ ಅದು ನಮ್ಮ ರಾಷ್ಟ್ರಭಕ್ತಿಯ ತಾಣ. ಶ್ರೀರಾಮನು ರಾಷ್ಟ್ರದ ಪ್ರತೀಕ. ಕರಗಿರುವ ರಾಷ್ಟ್ರೀಯತೆಯ ಪೂರ್ಣಸ್ಫಟಿಕ ರೂಪವು ಹರಳುಗಟ್ಟುವ ಸಮಯವಿದು. ದೇಶದ ಬಗ್ಗೆ ಕಂಡ ಕನಸುಗಳೆಲ್ಲವೂ ಸಾಕಾರಗೊಳ್ಳುವ ಸುವರ್ಣ ಸಮಯವೀಗ ನಮ್ಮ ಮುಂದಿದೆ. ಇಂತಹ ಸ್ವರ್ಣಿಮ ಘಳಿಗೆಗಳಲ್ಲಿ ನಾವು ಬಂದೆವು. ಪೂರ್ಣಗೆಲುವಿನ ನಿರೀಕ್ಷೆಯಲ್ಲೇ ಬದುಕಿದೆವು. ಇದು ನಮ್ಮ ಜೀವನದ ಹೆಚ್ಚುಗಾರಿಕೆ.

ಸಮಾಜವು ಸಾಮೂಹಿಕವಾಗಿ ಪಟ್ಟ ನೋವನ್ನು ನಾವು ಅನುಭವಿಸಿದ್ದೆವು. ತುರ್ತು ಪರಿಸ್ಥಿತಿಯ ಕ್ರೂರ ದಬ್ಬಾಳಿಕೆಯ ಆ ವ್ಯಾಪಕರೂಪವನ್ನು ನಾವು ಕಂಡವರು. ಅದರ ವಿರುದ್ಧ ಹೋರಾಡಿ ಗೆದ್ದೆವು. ಕೋವಿಡ್–19ರ ಆತಂಕದ ಅಗಾಧ ಪರಿಣಾಮವನ್ನು ಅನುಭವಿಸಿದೆವು. ಆ ಕಾಲಗಳಲ್ಲಿ ಜಗತ್ತಿನ ನೋವನ್ನು ಪರಿಹರಿಸಲು ಮುಂದಾದೆವು. ಇವೆಲ್ಲವುಗಳ ಕರಾಳತೆಯನ್ನು ತೊಳೆದು ಬಿಡುವ ಮರೆತು ಬಿಡುವ ಆನಂದಾನುಭವವು ಇಂದಿನದು. ಇದು ಶಾಶ್ವತವಾಗಿರುತ್ತದೆ. ಈ ಉತ್ಸಾಹದಿಂದ ಹಿಂದು ಸಮಾಜವು 'ಆ ದಿವವ ಭುವಿಗೆ ಸೆಳೆಯುವ' ಶಕ್ತಿಯುಳ್ಳದಾಗಿರುತ್ತದೆ. ಅದುವೆ ಭಾರತವನ್ನು ಮತ್ತೆ ಜಗದಾನಂದ ಕಾರಕವಾಗಿಸುತ್ತದೆ. ಅದನ್ನು ಕಾಣುವ ಕಾಲ ಇನ್ನೇನು? ಇಲ್ಲೇ ಸ್ವಲ್ಪ ಮುಂದಿದೆ.

# ಮನಸ್ಸು ಮತ್ತು ಹೃದಯ ರಾಮಮಯ

– ಡಾ. ಆರತಿ ವಿ.ಬಿ.



500 ವರ್ಷಗಳಿಂದ ಯಾವ ಅದ್ಭುತ ಅಮೃತಘಳಿಗೆಗಾಗಿ ನಾವೆಲ್ಲರೂ ಕಾಯುತ್ತಾ ಇದ್ದೆವೋ, ಅಂಥಾ ಅದ್ಭುತ, ಅಮೃತಘಳಿಗೆಯಲ್ಲಿ ನಾನು ಅಯೋಧ್ಯಾ ನಗರದಲ್ಲಿದ್ದೆ. ರಾಮಲಲಾ ಪುನರ್‌ಪ್ರತಿಷ್ಠಾಪನೆಯ ಈ ಸಂದರ್ಭದಲ್ಲಿ ಆ ಕ್ಷಣದಲ್ಲಿ ಅಲ್ಲಿದ್ದು ಪಾಲ್ಗೊಳ್ಳುವ ಅನಿರೀಕ್ಷಿತ ಭಾಗ್ಯವು ನನಗೆ ಒದಗಿತು. ಇದನ್ನು ನಾನು ಕನಸು ಮನಸಲ್ಲೂ ಅಂದುಕೊಂಡಿರಲಿಲ್ಲ. ಅನುಗ್ರಹ ಅಂದರೆ ಹೇಗಿರುತ್ತದೆ ಎನ್ನುವುದು ನನಗೆ ಅಲ್ಲಿ ಅರ್ಥವಾಯಿತು. ನಾವು ಬಯಸುವುದಕ್ಕಿಂತ ಹೆಚ್ಚಿನದನ್ನು ಪರಮಾತ್ಮ ನಮಗೆ ಕೊಡುತ್ತಾನೆ. ಅಯೋಧ್ಯೆಯಲ್ಲಿ ಸೋಮವಾರದ ಆ ಕ್ಷಣಗಳ ಸಾರ್ಥಕ್ಯದ ಭಾವ, ಧನ್ಯತೆಯ ಭಾವ ನನ್ನನ್ನು ಅವರಿಸಿಕೊಂಡಿತು. ಅದನ್ನು ವಿವರಿಸಿ ಹೇಳುವುದಕ್ಕೆ ನನ್ನಲ್ಲಿ ಪದಗಳಿಲ್ಲ.

ಕಾರ್ಯಕ್ರಮದ ಆಯೋಜನೆಯನ್ನು ಅತ್ಯಂತ ವ್ಯವಸ್ಥಿತವಾಗಿ, ಸ್ಪಷ್ಟತೆಯೊಂದಿಗೆ ಮಾಡಲಾಗಿತ್ತು. ಆವರಣದೊಳಕ್ಕೆ ಪ್ರವೇಶಿಸುವುದಕ್ಕೂ ಮುನ್ನ ಬಿಗಿಯಾದ ಚೆಕಿಂಗ್ ಇತ್ತು. ವ್ಯವಸ್ಥಿತ ರೀತಿಯಲ್ಲಿ ನಮ್ಮನ್ನು ಒಳಕ್ಕೆ ಕರೆದೊಯ್ದು ಕೂರಿಸಿದರು. ತಿಂಡಿ ನೀಡಿದರು. ಭೋಜನ ಮತ್ತು ನೀರಿನ ವ್ಯವಸ್ಥೆಯನ್ನೂ ಮಾಡಲಾಯಿತು. ಇನ್ನು ಅಲಂಕಾರವಂತೂ, ಸ್ವರ್ಗವೇ ನಾಚಬೇಕು. ಅಷ್ಟು ಸೊಗಸಾಗಿತ್ತು. ಹೆಚ್ಚುಕಡಿಮೆ ಇಡೀ ದಿನ ರಾಮ ಮಂದಿರದ ಆವರಣದಲ್ಲಿಯೇ ಕಳೆಯುವ ಹಾಗಾಯಿತು. ಶುಭ್ರ ನೀಲಾಕಾಶದ ಹಿನ್ನೆಲೆಯಲ್ಲಿ ರಾಮ ಮಂದಿರ ಇನ್ನಷ್ಟು ಸುಂದರವಾಗಿ ಕಂಗೊಳಿಸುತ್ತಿತ್ತು. ಪ್ರತ್ಯಕ್ಷ ರಾಮಮಂದಿರ ಇನ್ನೂ ಪೂರ್ತಿಯಾಗಿಲ್ಲ. ಕೆಲವು ಭಾಗಗಳು ಇನ್ನೂ ರೂಪುಗೊಳ್ಳಬೇಕಿವೆ. ಈಗಲೇ ಇಷ್ಟು ಸುಂದರವಾಗಿ ಕಾಣುತ್ತಿರುವ ರಾಮಮಂದಿರ ಪೂರ್ಣಗೊಂಡ ಮೇಲೆ ಇನ್ನಷ್ಟು ಸುಂದರವಾಗಿ ಕಾಣಬಹುದು ಎಂಬುದನ್ನು ಊಹಿಸಿದರೆ ರೋಮಾಂಚನವಾಗುತ್ತದೆ. ವಿಶಾಲವಾದ ಜನಸ್ತೋಮ, ಸಾಧುಸಂತರು, ಭಕ್ತರು, ಘನತೆವೆತ್ತ ವ್ಯಕ್ತಿಗಳು, ಹಿರಿಯರು, ವಿಜ್ಞಾನಿಗಳು, ಸೇನೆಯವರು, ಸಿನಿಮಾ ಕಲಾವಿದರು, ಬೇರೆಬೇರೆ ಕ್ಷೇತ್ರಗಳ ಸಾಧಕರು ಅಕ್ಕಪಕ್ಕ ಆಸೀನರಾಗಿದ್ದರು. ಅವರ ಮಧ್ಯೆ ಕೂತು ಐತಿಹಾಸಿಕ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದು ಅವಿಸ್ಮರಣೀಯ ಕ್ಷಣ. ಇನ್ಯಾವ ಆಸೆ ಆಕಾಂಕ್ಷೆಗಳೂ



ಈ ಅನುಭೂತಿಗಿಂತ ಮಿಗಿಲಾಗಲು ಸಾಧ್ಯವೇ ಇಲ್ಲ. ನಿಜಕ್ಕೂ ಈ ಅಯೋಧ್ಯೆ, ರಾಮ, ಈ ಮಂದಿರ ತುಂಬ ತುಂಬಾ ವಿಶೇಷವಾದುದು.

ನನ್ನಷ್ಟೇ ರೋಮಾಂಚನವನ್ನು ಆನಂದವನ್ನು ಮನೆಯಲ್ಲಿ ಕುಳಿತು ಈ ಕಾರ್ಯಕ್ರಮವನ್ನು ಕಣ್ತುಂಬಿಸಿಕೊಂಡ ವೀಕ್ಷಕರೂ ಪಟ್ಟಿರಬಹುದು. ಆದರೆ ಈ ಆನಂದ ಆನಂದವೇ. ಕರ್ನಾಟಕದ ಶಿಲೆ, ಕನ್ನಡಿಗ ಶಿಲ್ಪಿಯ ರಾಮ ಅಲ್ಲಿ ಪ್ರತಿಷ್ಠಾಪಿತನಾಗಿದ್ದಾನೆ ಎನ್ನುವುದು ಮತ್ತೊಂದು ಖುಷಿ. ಅಲ್ಲಿ ಅಲಂಕಾರಕ್ಕೆ ಬಳಸಲ್ಪಟ್ಟ ಹೂಗಳೆಲ್ಲವೂ ಕರ್ನಾಟಕದಿಂದಲೇ ಬಂದಿದ್ದೆಂದು ಅಲ್ಲಿದ್ದ ಕಾರ್ಯಕರ್ತರು ಹೇಳಿದರು. ಅದನ್ನು ಕೇಳಿದ ಮೇಲಂತೂ ನನ್ನ ಸಂತಸ ಇಮ್ಮಡಿಸಿತು. ಅಯೋಧ್ಯೆಯ ಬೀದಿಬೀದಿಗಳಲ್ಲಿ ಜನರ ಉತ್ಸಾಹ, ಉಲ್ಲಾಸ, ಭಜನೆ, ಹಾಡು, ಕುಣಿತ ಮುಗಿಲುಮುಟ್ಟಿತ್ತು. ದೇಶದ ಅನೇಕ ಭಾಗಗಳಿಂದ ಬಂದಿದ್ದ ಜಾನಪದ ಕಲಾವಿದರು ಅಲ್ಲಲ್ಲಿ ತಮ್ಮದೇ ವೇದಿಕೆ ರೂಪಿಸಿಕೊಂಡು ಕಲಾಪ್ರದರ್ಶನ ನೀಡುತ್ತಿದದ್ದು ಗಮನ ಸೆಳೆಯಿತು. ಯಜ್ಞಗಳು, ಹೋಮಗಳು, ಪೂಜೆ ಪುನಸ್ಕಾರಗಳು ಸಾಗರೋಪಾದಿಯಲ್ಲಿ ನಡೆಯುತ್ತಲೇ ಇದ್ದವು. ಜನರ ಜೈ ಶ್ರೀರಾಂ ಘೋಷಣೆಗಂತೂ ಕೊನೆಯೇ ಇರಲಿಲ್ಲ. ರಾಮನ ನಾಮಸ್ಮರಣೆಯನ್ನು ಇಷ್ಟರಮಟ್ಟಿಗೆ ನಾನಂತೂ ನನ್ನ ಜೀವನದಲ್ಲಿ ಕೇಳಿಯೇ ಇಲ್ಲ. ಇದರಿಂದ ಮನಸ್ಸು, ಹೃದಯ ರಾಮಮಯವಾಗಿದೆ. ಬಹಳ ಒಳ್ಳೆಯ ಕಾರ್ಯಕ್ರಮ ಮೋದಿಜೀ ನೇತೃತ್ವದಲ್ಲಿ ನಡೆಯಿತು. ಸಮಸ್ತ ಭಾರತೀಯರ ಪ್ರತಿನಿಧಿಯಾಗಿ ಅವರು ಕಾರ್ಯಕ್ರಮವನ್ನು ನಡೆಸಿಕೊಟ್ಟ ರೀತಿ ನೋಡಿ ಹೃದಯ ತುಂಬಿಬಂದಿತು. ಅವರ ಮೇಲಿನ ಅಭಿಮಾನ ಹೆಚ್ಚಿತು. ನಮ್ಮನಮ್ಮ ಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ದೇಶ ಸೇವೆಗೆ ನಮ್ಮ ಕೈಲಾದಷ್ಟು ಪ್ರಯತ್ನ ಮಾಡಬೇಕು. ರಾಮರಾಜ್ಯ ನಿರ್ಮಾಣಕ್ಕೆ ರಾಮನ ಅನುಗ್ರಹ ಎಷ್ಟು ಮುಖ್ಯವೋ ನಮ್ಮೆಲ್ಲರ ತನುಮನಧನ ಕೂಡಾ ಅಷ್ಟೇ ಮುಖ್ಯ.

(ಕೃಪೆ ವಿಜಯ ಕರ್ನಾಟಕ)

## ರಾಷ್ಟ್ರೀಯತೆಯ ಮಹಿಮೆ

ಗೂಢಚಾರ ವ್ಯಕ್ತಿಗಳು ಪರದೇಶದ ರಹಸ್ಯಗಳನ್ನು ಅನೇಕ ಸಲ ಕದ್ದೇ ತರುತ್ತಾರೆ. ಅನೇಕ ಸಲ ಫೈಲ್‌ಗಳನ್ನೇ ಕದಿಯುತ್ತಾರೆ. ಸಾಧಾರಣವಾಗಿ ಕಳ್ಳತನ ನಿಂದ್ಯ ಎನಿಸಿದರೂ ಗೂಢಚಾರಿಕೆಯಲ್ಲಿ ರಾಷ್ಟ್ರೀಯತೆಯ ಭಾವ ಇರುವುದರಿಂದ ಅದಕ್ಕೆ ಮಾನ್ಯತೆ, ಗೌರವ. ಸೈನಿಕನೊಬ್ಬ ಗುಂಡು ಹಾರಿಸಿ ಶತ್ರುಗಳನ್ನು ಹೆಚ್ಚು ಹೆಚ್ಚು ಮರ್ದನ ಮಾಡಿದಷ್ಟೂ ಅವನಿಗೆ ಗೌರವ ಹೆಚ್ಚು. ಸಾಧಾರಣವಾಗಿ ವ್ಯಕ್ತಿಯನ್ನು ಕೊಂದರೆ ಮರಣದಂಡನೆ ಸಿಗುವುದಾದರೂ, ಸೈನಿಕ ಆ ಕೆಲಸಮಾಡುವುದು ತನ್ನ ರಾಷ್ಟ್ರಕ್ಕಾಗಿ; ಅದಕ್ಕಾಗಿ ಅವನಿಗೆ ಪದಕಗಳೂ ಸಿಗುತ್ತವೆ. – **ಹೊ.ವೆ. ಶೇಷಾದ್ರಿ**

# ಹಿಂದೂ ವಿರೋಧಿ ರಾಜಕೀಯದ ಆಸ್ಥಾನ
# ಮುಜರಾಯಿ ದೇವಸ್ಥಾನ



ಹಿಂದು ಸಮಾಜವನ್ನು ಅಸಹಾಯಕವನ್ನಾಗಿಸುವ ರಾಜಕೀಯ ಕ್ರಮಗಳಲ್ಲಿ ಹಿಂದೂ ವಿರೋಧಿ ಸರ್ಕಾರಗಳು ಹಿಂದು ದೇವಸ್ಥಾನಗಳ ಆಡಳಿತದಲ್ಲಿ ನೇರವಾಗಿ ಹಸ್ತಕ್ಷೇಪ ಮಾಡುವುದೂ ಒಂದು. ವಿವಿಧ ರೀತಿಗಳಿಂದ ದೇವಸ್ಥಾನಗಳ ಆದಾಯವನ್ನು ಸರ್ಕಾರವು ಕಬಳಿಸುವುದು ಮಾತ್ರ ಕಣ್ಣಿಗೆ ಕಂಡರೂ; ದೇವಸ್ಥಾನಗಳನ್ನು ಹಿಂದೂ ವಿರೋಧಿ ಶಕ್ತಿಗಳ ಆಶ್ರಯ ತಾಣವನ್ನಾಗಿಸಿ ದೈವಭಕ್ತರನ್ನು ಹುಂಡಿ ತುಂಬಿಸುವ ಆದಾಯ ಮೂಲಗಳೆಂದು ಮಾತ್ರ ಪರಿಗಣಿಸುವುದು ಅಂತಹ ಸರ್ಕಾರಗಳ ಅಘೋಷಿತ ನೀತಿಯೇ ಆಗಿಬಿಟ್ಟಿದೆ.

ಆದಾಯವೇ ಇಲ್ಲದ ರಾಜ್ಯದ 'ಸಿ' ವರ್ಗದ 33 ಸಾವಿರ ದೇವಸ್ಥಾನಗಳ ಅರ್ಚಕರಿಂದ ಹೆಚ್ಚುವರಿಯಾಗಿ ನೀಡಲಾಗಿದೆಯೆಂದು ಕಾರಣ ನೀಡಿ ಅವರಿಗೆ ನೀಡಿದ ಮಾಸಿಕ ಚಿಲ್ಲರೆ ಹಣವನ್ನೂ ವಸೂಲಿ ಮಾಡುವ ನಿರ್ದಯತೆ ಒಂದು ಕಡೆಯಾದರೆ; 'ಎ' ಗ್ರೇಡ್ ದೇವಸ್ಥಾನಗಳ ಆದಾಯವನ್ನು ಕಬಳಿಸುತ್ತ ಅಲ್ಲಿಯ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಆಡಳಿತ ಶಾಹಿಯ ಕಡೆ ಕೈಚಾಚುವ ಪರಿಸ್ಥಿತಿ ಇನ್ನೊಂದು ಕಡೆ ಇದೆ.

ಈ ಕೆಳಗೆ ದೇವಸ್ಥಾನಗಳ ಪ್ರಸ್ತುತ ಆರ್ಥಿಕ ಸ್ಥಿತಿಯ ಸ್ಥೂಲ ವಿವರವನ್ನು ನೀಡುವ ಪ್ರಯತ್ನವಿದೆ. ರಾಜ್ಯದ ಒಟ್ಟು ಮುಜರಾಯಿ ದೇವಸ್ಥಾನಗಳು 34165

- 'ಎ' ವರ್ಗದ ದೇವಸ್ಥಾನಗಳು 205
- 'ಬಿ' ವರ್ಗದ ದೇವಸ್ಥಾನಗಳು 195
- 'ಸಿ' ವರ್ಗದ ದೇವಸ್ಥಾನಗಳು 33765

ಈ ದೇವಸ್ಥಾನಗಳ ಒಟ್ಟು ಆದಾಯ 708.87 ಕೋಟಿ ರೂಪಾಯಿಗಳು

- ಇವುಗಳಲ್ಲಿ 'ಎ' ವರ್ಗದ ದೇವಸ್ಥಾನಗಳ ಆದಾಯ 513.46 ಕೋಟಿ ರೂಪಾಯಿಗಳು
- 'ಬಿ' ವರ್ಗದ ದೇವಸ್ಥಾನಗಳ ಆದಾಯ 29.79 ಕೋಟಿ ರೂಪಾಯಿಗಳು

ದೇವಸ್ಥಾನಗಳ ಆದಾಯದ 60% ಭಾಗವು ದೇವಸ್ಥಾನಗಳ ಅಭಿವೃದ್ಧಿಗೆ ವಿನಿಯೋಗವಾಗಿವೆ ಎಂದು ಸರ್ಕಾರವು ವಿಧಾನ ಸಭೆಯಲ್ಲಿ ಹೇಳಿದೆ. ಆದರೆ ಅದು ನಿಜವಾಗಿರಬಹುದೇ?

**ಇನ್ನೀಗ ಪ್ರಮುಖ ದೇವಸ್ಥಾನಗಳ ಆದಾಯದ ವಿವರವನ್ನು ನೋಡೋಣ**

- ಕುಕ್ಕೆ ದೇವಸ್ಥಾನದ ಆದಾಯ 123.64 ಕೋಟಿ ರೂಪಾಯಿಗಳು
- ಕೊಲ್ಲೂರು ದೇವಸ್ಥಾನದ ಆದಾಯ 59.47 ಕೋಟಿ ರೂಪಾಯಿಗಳು
- ಮೈಸೂರು ಚಾಮುಂಡಿ ದೇವಸ್ಥಾನದ ಆದಾಯ 52.47 ಕೋಟಿ ರೂಪಾಯಿಗಳು
- ಎಡೆಯೂರು ದೇವಸ್ಥಾನದ ಆದಾಯ 36.48 ಕೋಟಿ ರೂಪಾಯಿಗಳು
- ಕಟೀಲು ದೇವಸ್ಥಾನದ ಆದಾಯ 32.00 ಕೋಟಿ ರೂಪಾಯಿಗಳು
- ನಂಜನಗೂಡು ದೇವಸ್ಥಾನದ ಆದಾಯ 26.71 ಕೋಟಿ ರೂಪಾಯಿಗಳು
- ಸವದತ್ತಿ ಎಲ್ಲಮ್ಮ ದೇವಸ್ಥಾನದ ಆದಾಯ 22.52 ಕೋಟಿ ರೂಪಾಯಿಗಳು
- ಮಂದರ್ತಿ ದೇವಸ್ಥಾನದ ಆದಾಯ 14.58 ಕೋಟಿ ರೂಪಾಯಿಗಳು
- ಘಾಟಿ ಸುಬ್ರಹ್ಮಣ್ಯ ದೇವಸ್ಥಾನದ ಆದಾಯ 12.25 ಕೋಟಿ ರೂಪಾಯಿಗಳು



- ಬೆಂಗಳೂರು ಬನಶಂಕರಿ ದೇವಸ್ಥಾನದ ಆದಾಯ 10.58 ಕೋಟಿ ರೂಪಾಯಿಗಳು
- ಸೌತಡ್ಕ ಗಣಪತಿ ದೇವಸ್ಥಾನದ ಆದಾಯ 10.00 ಕೋಟಿ ರೂಪಾಯಿಗಳು
- ಕಬ್ಬಾಳಮ್ಮ ದೇವಸ್ಥಾನದ ಆದಾಯ 5.06 ಕೋಟಿ ರೂಪಾಯಿಗಳು
- ಗಾಣಗಾಪುರ ದೇವಸ್ಥಾನದ ಆದಾಯ 4.00 ಕೋಟಿ ರೂಪಾಯಿಗಳು
- ಹಂಪಿ ವಿರೂಪಾಕ್ಷ ದೇವಸ್ಥಾನದ ಆದಾಯ 2 ಕೋಟಿ ರೂಪಾಯಿಗಳು

ಆದಾಯದ ಶೇಕಡಾ 60ಭಾಗವನ್ನು ದೇವಸ್ಥಾನದ ಅಭಿವೃದ್ಧಿಗೆ ವಿನಿಯೋಗಿಸಲಾಗಿದೆ ಎಂದು ಕೈತೊಳೆಯುವ ನಾಸ್ತಿಕ ಸರ್ಕಾರದ ನಿಲುವು ಆಸ್ತಿಕ ಭಕ್ತರ ಊಹೆಗೆ ಬಿಟ್ಟಿದೆ.

## ಕಾರ್ಯಕರ್ತರ ಗಮನಕ್ಕಾಗಿ

**ಹಿಂದುವಾಣಿಗಾಗಿ ಪರಿಷತ್ತಿನ ಕಾರ್ಯಕ್ರಮಗಳ ಭಾವಚಿತ್ರಗಳನ್ನು ಕಳುಹಿಸುವಾಗ:**

1. ಭಾವಚಿತ್ರಗಳು ಜೆ.ಪಿ.ಜಿ. ಸ್ವರೂಪ (jpg Format) ದಲ್ಲಿರಬೇಕು.
2. ಭಾವಚಿತ್ರಗಳನ್ನೆಲ್ಲಾ ಒಂದು ಕಡೆ ಸೇರಿಸಿ (Combined) ಕಳುಹಿಸಬಾರದು. ಪ್ರತ್ಯೇಕವಾಗಿ ಕಳುಹಿಸಬೇಕು.
3. ಚಲಿಸುವ ಚಿತ್ರಗಳಾಗಿರದೆ (Vidio), ನಿಶ್ಚಲ (Still Photo) ಭಾವಚಿತ್ರಗಳಾಗಿರಲಿ.

# ಮಂತ್ರಾಕ್ಷತೆ ಸ್ವೀಕರಿಸಿರಿ, ಅಯೋಧ್ಯೆಗೆ ಬನ್ನಿರಿ

– ಬಿ.ಇ. ಸುರೇಶ

ಆ ಎರಡು ವಾರಗಳೆಂದರೆ ಹೃದಯ ಮನಸ್ಸುಗಳೆರಡು ತುಂಬಿ ಬರುವ ಚಟುವಟಿಕೆಗಳಲ್ಲಿ ತೊಡಗಿಕೊಂಡ ದಿನಗಳು. ತ್ರೇತಾಯುಗದಲ್ಲಿ ಕೋಸಲ ದೇಶದ ಪ್ರಜೆಗಳು ಶ್ರೀರಾಮನ ಪಟ್ಟಾಭಿಷೇಕದಲ್ಲಿ ಸಂಭ್ರಮಿಸಿದಂತಹ ವಾತಾವರಣ. ಬೆಳಗಾದರೆ ಸಾಕು ಜೀವನದಲ್ಲೇನೋ ಮಹತ್ತಾದ ಕಾರ್ಯವೊಂದನ್ನು ಮಾಡಲು ಹೊರಡುವ ಉತ್ಸಾಹ.

ಜನವರಿ ತಿಂಗಳ 1 ರಿಂದ 15ರ ವರೆಗೆ ಪ್ರತಿ ಮನೆಗಳಿಗೆ ಹೋಗಿ ಅಯೋಧ್ಯೆಯ ಶ್ರೀರಾಮನ ಸಮಕ್ಷಮದಲ್ಲಿ ಮಂತ್ರಿಸಿ ತಂದ ಅಕ್ಷತೆಯನ್ನು ಕೊಟ್ಟು ಶ್ರೀರಾಮನ ದರ್ಶನಕ್ಕೆ ಬರಲು ಆಹ್ವಾನಿಸುವ ಯೋಜನೆಯಿದ್ದಿತು. ದೇಶಾದ್ಯಂತ ಕೋಟ್ಯಾಂತರ ಕಾರ್ಯಕರ್ತರು ತಮ್ಮನ್ನು ಅದರಲ್ಲಿ ತೊಡಗಿಸಿಕೊಂಡಿದ್ದರು. ಅಂದು ಸುಗ್ರಿವನು ಸೀತಾನ್ವೇಷಣೆಗಾಗಿ ಕರೆಕೊಟ್ಟಾಗ ಇದೇ ರೀತಿ ವಾನರ ಸೈನ್ಯವು ಹೊರಟು ಬಂದಿದ್ದಿತ್ತೆಂದು ಮಹರ್ಷಿ ವಾಲ್ಮೀಕಿ ತಮ್ಮ ರಾಮಾಯಣದಲ್ಲಿ ಹೇಳಿದ್ದರು.

ನಾವು ಹೊರಟ ಜನವರಿ 1ರ ಮೊದಲೇ ಪ್ರತಿಕೆಗಳೂ ಇತರ ಮಾಧ್ಯಮಗಳೂ ನಮ್ಮ ಬರುವಿಕೆಯನ್ನು ಜನಜನಿತವಾಗಿಸಿ ಬಿಟ್ಟಿದ್ದವು. ಅದಕ್ಕಾಗಿ ಕಾದು ಕೂತ ರಾಮಭಕ್ತರೂ ಇದ್ದರು. ಅವರ ಮನಸ್ಸಿನ ಹಿಗ್ಗು ಮುಖದಲ್ಲಿ ಪ್ರತಿಫಲಿತವಾಗುತ್ತಿರುವುದನ್ನು ಕಾಣುವುದೇ ನಮ್ಮ ಪಾಲಿನ ಹಬ್ಬ. ಇನ್ನೂ ಹಲವರಿಗೆ ಬಾಗಿಲು ತಟ್ಟಿದಾಗ ಸೇಲ್ಸ್‌ಮನ್ ಬಂದಿರಬೇಕೆಂದುಕೊಂಡು ಮುಖವು ವ್ಯಗ್ರವಾಗಿ ಬಿಟ್ಟಿರುತ್ತಿತ್ತು. ಅದು ಒಂದೇ ಕ್ಷಣ. ನಮ್ಮ ಮುಖವನ್ನು ಕಾಣುತ್ತಲೇ ಮುಖದಲ್ಲಿ ಪ್ರಸನ್ನತೆಯು ಮೂಡಿ ಬರುತ್ತಿತ್ತು. ಅನೈಚ್ಛಿಕವಾಗಿ ಕೈಜೋಡಿಸಿಕೊಂಡು 'ನಮಸ್ಕಾರ ಬನ್ನಿ' ಎನ್ನುವ ಮಾತಿನೊಂದಿಗೆ ಸ್ವಾಗತಿಸುವುದು ನಡೆಯುತ್ತಿದ್ದಿತು. ಮನೆಯೊಳಗೆ ಕರೆಯುವುದಂತೂ ಸಾಮಾನ್ಯವಾಗಿದ್ದಿತು. ಕೆಲವು ಮನೆಗಳಲ್ಲಿ ಅವರೊಂದಿಗೆ ತಿಂಡಿ, ಕಾಫಿಗಳೂ ನಡೆದವು.

ನಾವು ಚಿಕ್ಕಂದಿನಲ್ಲಿ ಆರ್.ಎಸ್.ಎಸ್ ಎಂದವರು ಬಹಳ ಮಂದಿ. 'ಯಾರು ಏನೇ ಹೇಳಲಿ; ನಾವಂತೂ ರಾಮಭಕ್ತರು' ಎಂದು ಭರವಸೆಯ ಮಾತು ಆಡಿದವರು. ಇನ್ನು ಹಲವರು ಪ್ರಚಲಿತ ರಾಜಕಾರಣವನ್ನೂ ದೇಶದ ಪ್ರಧಾನಿಗಳನ್ನು ಉಲ್ಲೇಖಿಸುವುದು ಸರ್ವೇಸಾಮಾನ್ಯವಾಗಿದ್ದಿತು. ಅಂತಹ ಮಾತುಕತೆಯನ್ನು ಶ್ರೀರಾಮ ಜಾನಕಿಯರತ್ತ ಅಯೋಧ್ಯೆಯತ್ತ ತಿರುಗಿಸುವುದೇ ಪ್ರಯಾಸದ ಪ್ರಯತ್ನವಾಗಿ ಬಿಡುತ್ತಿತ್ತು.

ನಮ್ಮ ಊರಿನಲ್ಲಿ ಮೊನ್ನೆಯೇ ಮಂತ್ರಾಕ್ಷತೆಯನ್ನು ತಂದು ಕೊಟ್ಟರಂತೆ. ಇದು ದೊಡ್ಡ ಸಿಟಿಯಾದುದರಿಂದ ನಮ್ಮ ಮನೆಗೆ ಬಾರದೆ ಇರಬಹುದೆಂದುಕೊಂಡ ನಮ್ಮ ಮಾವನವರು ಬಂದು ತಂದುಕೊಟ್ಟರು. ಎಂದು ದೇವರ ಕೋಣೆಯ ಹರಿವಾಣದಲ್ಲಿದ್ದ ಪೊಟ್ಟಣವನ್ನು ತಂದು ತೋರಿಸಿದ ತಾಯಂದಿರೂ ಸಿಕ್ಕಿದರು. ನಮ್ಮ ಚಟುವಟಿಕೆಗಳ ಪರಿಚಯವಿದ್ದವರು ನಮಗಂತೂ ನೀವು ಬಂದೇ ಬರುತ್ತೀರಿ ಎಂದು ಗೊತ್ತಿತ್ತು; ಎನ್ನುವ ಖಚಿತತೆಯ ಮಾತು

ಆಡಿದರು. ಈಗತಾನೆ ಪೂಜೆಗೆ ಕೂತಿದ್ದೆ. ರಾಮ ರಕ್ಷಾ ಸ್ತೋತ್ರ ಹೇಳುತ್ತಿದ್ದಂತೆ ನೀವು ಬಂದಿರಿ ಎನ್ನುವ ಶುಭಾಗಮನದ ಸ್ವಾಗತಕೋರಿ ಪೂಜೆಯ ಪ್ರಸಾದ ನೀಡಿದವರಿದ್ದರು.

ಹಲವು ಅಪಾರ್ಟ್‌ಮೆಂಟ್‌ಗಳ ಮನೆಗಳ ಯಜಮಾನರು ತಮ್ಮ ಭದ್ರತಾ ಸಿಬ್ಬಂದಿಗಳಿಗೆ ಕಟ್ಟುನಿಟ್ಟಾದ ಸೂಚನೆಗಳನ್ನು ಕೊಟ್ಟಿಟ್ಟಿದ್ದರು. ಹಾಗಾಗಿ ಭಗವಾಧ್ವಜವನ್ನು ತಮ್ಮ ಮೇಜಿಗೆ ಕಟ್ಟಿಕೊಂಡ ಸಿಬ್ಬಂದಿಗಳು ಅಪಾರ್ಟ್‌ಮೆಂಟಿನ ಮನೆಗಳ ಸಂಖ್ಯೆಯನ್ನು ಕೊಟ್ಟು ಅಷ್ಟು ಮಂತ್ರಾಕ್ಷತೆಯ ಪೊಟ್ಟಣಗಳನ್ನು ಸ್ವೀಕರಿಸಿದರು. ನಮ್ಮ ಮೊಬೈಲ್ ಸಂಖ್ಯೆಯನ್ನು ಪಡೆದುಕೊಳ್ಳಲೂ ಹೇಳಿಟ್ಟಿದ್ದರು. ಹಾಗಾಗಿ ರಾತ್ರಿ 'ವಿ ಆರ್ ಬ್ಲೆಸ್ಸ್‌ಡ್' ಥ್ಯಾಂಕ್ಸ್ ಎ ಲಾಟ್' ಎನ್ನುವ ದೂರವಾಣಿಯ ಧನ್ಯವಾದದ ಕರೆಗಳು ಇದ್ದೇ ಇರುತ್ತಿದ್ದವು. ಭದ್ರತಾ ಸಿಬ್ಬಂದಿಗಳಿಗಾಗಿ ಪ್ರತ್ಯೇಕವಾಗಿ ಅಕ್ಷತೆ ಮತ್ತು ಮಂದಿರದ ಭಾವಚಿತ್ರದ ಕಾರ್ಡುಗಳನ್ನು ಕೊಟ್ಟಾಗ ತಾವು ಉತ್ತರಾಖಂಡದವರೆಂದೋ, ಗೋರಖಪುರದವರೆಂದೋ ಹೇಳಿ ಪರಿಚಯಿಸುತ್ತಾ ತಮ್ಮ ಸಾಮಿಪ್ಯವನ್ನು ಹೆಮ್ಮೆಯಿಂದ ಘೋಷಿಸುತ್ತಿರುತ್ತಿದ್ದರು.

ಕೆಲವು ಮನೆಯವರು 'ಸರ್, ನಮ್ಮ ಅಕ್ಕ ಮತ್ತು ಅಣ್ಣ ಬೇರೆ ಬಡಾವಣೆಗಳಲ್ಲಿದ್ದಾರೆ. ಅವರಿಗೆ ಮುಟ್ಟಿಸಲು ಹೆಚ್ಚುವರಿ ಅಕ್ಷತೆ ಕೊಡುತ್ತೀರಾ' ಎಂದು ಸಣ್ಣ ಬೇಡಿಕೆಗಳನ್ನು ಇಡುತ್ತಿದ್ದರು. 22ನೇ ತಾರೀಕಿನಂದು ಮನೆ ಮೇಲೆ ಹಾರಿಸಲು ಬಾವುಟ ಕೊಡುತ್ತೀರಾ ಎಂದು ಕೇಳುವವರು ಹಲವರು. ಮೊದಲೇ ನಮ್ಮನ್ನು ಒಳಬಿಡಬಾರದು, ಮಂತ್ರಾಕ್ಷತೆ ತೆಗೆದು ಕೊಳ್ಳಬಾರದೆಂದು ಒಂದೆರಡು ಅಪಾರ್ಟ್‌ಮೆಂಟ್‌ನವರು ಸಿಬ್ಬಂದಿಗಳಿಗೆ ತಾಕೀತು ಮಾಡಿದ್ದರು. ಆದರೆ ಸಿಬ್ಬಂದಿಗಳು ಮೊದಲು ತಮ್ಮ ಮನೆಗಳಿಗಾಗಿ ಅವನ್ನು ನಮ್ಮಿಂದ ಪಡೆದು ಮಾಲಿಕರ ಆಜ್ಞೆಯನ್ನು ನಮಗೆ ಹೇಳಿದರು. ಆದರೆ ಅಲ್ಲೂ ಕೂಡಾ ಹಿಂದಿರುಗಿ ಬರುವಾಗ ನಮ್ಮನ್ನು ಅಡ್ಡಗಟ್ಟಿ 'ಪರ್ಮಿಶನ್ ಕೊಟ್ಟಿದ್ದಾರೆ ಸರ್' ಬನ್ನಿ ಎಂದು ಸ್ವಾಗತಿಸಿದ ಉದಾಹರಣೆಯೂ ಇದ್ದಿತು.

ನಮ್ಮ ಕೇಸರಿ ಶಾಲು ನೋಡುತ್ತಲೇ, ತಮ್ಮ ವಾಹನಗಳನ್ನು ನಿಲ್ಲಿಸಿ 'ನಮ್ಮ ಮನೆಗೆ ಇನ್ನೂ ಮಂತ್ರಾಕ್ಷತೆ ತಲುಪಿಲ್ಲ ಸರ್. ಕೊಡುತ್ತೀರಾ ಎಂದು ಬೇಡಿಕೆ ಸಲ್ಲಿಸುತ್ತಿದ್ದುದೂ ಇದ್ದಿತು. ಅತಿ ಆಧುನಿಕ ಉಡುಪಿನಲ್ಲಿ ಕಂಗೊಳಿಸುತ್ತಿದ್ದ ತರುಣ ತರುಣಿಯರು ಮಂತ್ರಾಕ್ಷತೆಯನ್ನು ಭಕ್ತಿ ಭಾವಗಳಿಂದ ಬೊಗಸೆಯಲ್ಲಿ ಸ್ವೀಕರಿಸಿ ಅದನ್ನು ಹಣೆಗೊತ್ತಿಕೊಳ್ಳುತ್ತಿದ್ದುದು ಬಹಳ





ಕಡೆ ಕಂಡೆವು. ನಡುವಿನಲ್ಲಿ ಕಾಫಿ ಕುಡಿಯಲು ಹೋಟೆಲುಗಳಿಗೆ ಹೋದಾಗ ಬಿಲ್ ಕೊಡುವುದು ಬೇಡವೆಂದ ಹೋಟೆಲ್‌ಗಳೂ ಸಿಕ್ಕಿದವು. ಇಷ್ಟಾಗಿಯೂ ಬೆರಳೆಣಿಕೆಯಷ್ಟು ಕಡೆ ನಮ್ಮನ್ನು ಕಂಡವರೆ ಬಾಗಿಲು ಮುಚ್ಚಿದ್ದೂ ಇದೆ. ಅದೇ ಇನ್ನೊಂದೆರಡು ಕಡೆ ನಾವು ಕ್ರೈಸ್ತರಾದರೇನಂತೆ ಮುಸ್ಲಿಮರಾದರೇನಂತೆ ನಮ್ಮ ಮನೆಯಲ್ಲೂ ರಾಮ ಲಕ್ಷ್ಮಣ ಭರತರು ಬೇಕಲ್ಲವೇ ಎಂದು ನಮ್ಮಿಂದ ಅಕ್ಷತೆಗಳನ್ನು ಪಡೆದ ಅಪವಾದಗಳೂ ಇದ್ದವು.

ಆಯಾ ಬಡಾವಣೆಗಳ ಕಾರ್ಯಕರ್ತರ ದೂರವಾಣಿಯ ಸಂಖ್ಯೆಯನ್ನು ಪಡೆದು ಅವರ ಮನೆಗಳಿಗೆ ಹೋಗಿ ಮಂತ್ರಾಕ್ಷತೆಯನ್ನು ಪಡೆಯುವಂತೆ ತಮ್ಮ ಬಂಧುಗಳಿಗೆ ತಿಳಿಸಿದವರಿದ್ದರು. ಕೊರಿಯರ್‌ಗಳು ಅಂಚೆ ಪಾರ್ಸೆಲ್‌ಗಳೂ ಈ ದಿಶೆಯಲ್ಲಿ ತಮ್ಮ ಪಾತ್ರವನ್ನು ವಹಿಸಿದವು. 15ನೆ ತಾರೀಕಿಗೆ ವಿತರಣಾ ಗಡುವು ಮುಗಿದ ಮೇಲೂ ಕಾರ್ಯಕರ್ತರ ಮನೆಗೆ ಮುಗಿಬಿದ್ದು ಬಂದವರೂ ಇದ್ದರು. 21ರ ರಾತ್ರಿ 8.00 ಗಂಟೆಗೆ ನನ್ನ ಮೊಬೈಲ್ ಗುಣಗುಣಿಸುತ್ತಿತ್ತು. ಆ ಕಡೆ ಮಾತನಾಡುತ್ತಿದ್ದವರು ಬ್ಯಾಂಕೊಂದರ ಪ್ರಬಂಧಕಿ ಒಬ್ಬಾಕೆ. ಮಾತಿನಲ್ಲಿ ಕಾತರದ ಕಂಪನ. ನಮ್ಮ ಮನೆಗೆ ಇನ್ನೂ ಯಾರೂ ಬಂದಿಲ್ಲ. ನಾಳೆ 22. ಇವತ್ತು ಮಂತ್ರಾಕ್ಷತೆ ಬೇಕೇ ಬೇಕು. ಅಕ್ಷತೆ ಖಾಲಿಯಾಗಿ ಬಿಟ್ಟಿದೆಯಾ? ನಾನೂ ಯಜಮಾನರು ಎಷ್ಟೇ ದೂರ ಇದ್ದರೂ ಬರುತ್ತೇವೆ. ಎನ್ನುವ ಸರಮಾಲೆಯ ಮಾತು. ಅವರ ಮನೆಗೂ ಹೋಗಿ ತಲುಪಿಸಿ ಬಂದೆವು. ಈ ಎಲ್ಲಾ ದಿನಗಳ ಶ್ರಮವೆಲ್ಲವೂ 22ರ ಪ್ರತಿಷ್ಠಾಪನೆಯ ದಿನದಂದು ಬಾಲರಾಮನ ಮುಖದ ಮಂದಹಾಸವನ್ನು ಕಾಣುತ್ತಲೇ ಮರೆತೇ ಹೋಯಿತು.

ಈ ಅಭಿಯಾನದಲ್ಲಿ ನಮಗಾದ ಅನುಭವವೆಂದರೆ; ಎಲ್ಲರಿಗೂ 500 ವರ್ಷಗಳ ಸಂಘರ್ಷದ ಸ್ಥೂಲ ಪರಿಚಯವಿದೆ. ಅದಕ್ಕಾಗಿ ಹೋರಾಟ ನಡೆಸಿದವರು ಯಾರು; ಅದನ್ನು ಆಗಗೊಡದಂತೆ ಪ್ರಯತ್ನಿಸಿದವರು ಯಾರು ಎನ್ನುವುದೂ ತಿಳಿದಿದೆ. ಅತಿ ವಿದ್ಯಾವಂತರ ಶ್ರೀಮಂತಿಕೆ ಎನ್ನುವ ಈಗಿನ ವ್ಯಾಖ್ಯೆಯಂತೆ ಬದುಕುವವರ ಮನೆಯಲ್ಲಿ ಕಣ್ಣಿಗೆ ಗೋಚರವಾಗುವಂತಹ ಧಾರ್ಮಿಕ ವಾತಾವರಣವನ್ನು ಕಂಡೆವು. ಧಾರ್ಮಿಕ ಅನುಷ್ಠಾನದಲ್ಲಿರುವ ತರುಣ ತರುಣಿಯರೂ ಇರುವರು. ಆದರೆ ಇನ್ನು ಹಲವು ಕಡೆ ಉತ್ಸಾಹವಿದ್ದರೂ ರಾಮಾಯಣ, ಮಹಾಭಾರತ, ಗೀತೆಗಳ ಬಗ್ಗೆ ಅರಿವೂ ಇಲ್ಲದವರನ್ನು ಭೇಟಿಯಾದವು. ದೇಶ ಧರ್ಮಗಳ ಮುಗ್ಧ ಅಭಿಮಾನವು ಸರ್ವೇಸಾಮಾನ್ಯವಾಗಿ ಕಂಡು ಬಂದಿತು. ನಮ್ಮ ಅಪಾರ್ಟ್‌ಮೆಂಟಿನ ಹಿರಿಯರನ್ನು ಪರಿಚಯಿಸುತ್ತೇನೆ ಎಂದು ಪಂಚೆ ಉಟ್ಟು ನಮ್ಮೊಂದಿಗೆ ಬಂದವರೂ ಸಿಕ್ಕಿದರು. ಜೀವನದಲ್ಲಿ ಇಂತಹದೊಂದು ಅವಕಾಶ ಸಿಕ್ಕಿತ್ತಲ್ಲ. ಅಷ್ಟೇ ಸಾಕು. ಜೈ ಶ್ರೀರಾಮ್ ■

ರಾಷ್ಟ್ರವಾಗಲು ಕೇವಲ ಒಂದು ದೇಶದಲ್ಲಿ ಜನಸಮೂಹವೊಂದು ವಾಸಿಸುತ್ತದೆ ಎಂಬುದೇ ನಿರ್ಣಾಯಕ ಸಂಗತಿಯಾಗಲಾರದು. ಏಕೆಂದರೆ ಅನ್ಯ ದೇಶದ ಜನರೂ ಅಲ್ಲಿ ವಾಸಿಸಲು ಅವಕಾಶವಿದೆ. ನಮ್ಮ ದೇಶದಲ್ಲಿ ಹಿಂದೆ ಇಂಗ್ಲಿಷಿನವರೂ ಇದ್ದರು. ಕೇವಲ ಒಂದು ಭೂಮಿ ಮತ್ತು ಜನಸಮೂಹ' ಇವು ಮಾತ್ರ ಸಾಲದು. ಅಲ್ಲಿ ವಾಸಿಸುವ ಆ ಸಮೂಹ ಆ ದೇಶವನ್ನು 'ತಮ್ಮದು' ಎಂದು ಭಾವಿಸಬೇಕು.

# ಅದು ಮಂದಿರವಾಗಿತ್ತು ನಂತರ ಮಸೀದಿಯಾಗಿಸಿದರು

– ಟಿ.ಎ.ಪಿ. ಶೆಣೈ

ಜ್ಞಾನವಾಪಿ ಎನ್ನುವ ಸಂಸ್ಕೃತ ಹೆಸರಿನ ಮಸೀದಿಯೊಂದು ಇರುವುದೇ ವಿಶೇಷ. ಅದು ಕಾಶಿ ವಿಶ್ವನಾಥನ ದೇವಸ್ಥಾನಕ್ಕೆ ತಗಲಿಕೊಂಡಿದೆ. ಏನಾಗಿತ್ತು ಎಂದರೆ ಅಲ್ಲಿ ಮಸೀದಿಯೇ ಇದ್ದಿರಲಿಲ್ಲ. ಅದೆಲ್ಲವೂ ವಿಶ್ವನಾಥನ ವಿಶಾಲ ದೇವಸ್ಥಾನವಾಗಿತ್ತು ಎನ್ನುವುದನ್ನು ನಿಸ್ಸಂಶಯವಾಗಿ ಸಾರುವ ಸಮಯವು ಈಗ ಬಂದು ಬಿಟ್ಟಿದೆ. ಆ ಮಸೀದಿಯೆನ್ನುವ ಕಟ್ಟಡದ ಪಶ್ಚಿಮದ ಗೋಡೆಯವರೆಗಿನ ಜಾಗವು ಎಲ್ಲಾ ಸಾಕ್ಷ್ಯಾಧಾರಗಳನ್ನು ಒದಗಿಸಿ, ಅದು ಮಸೀದಿಯಲ್ಲವೇ ಅಲ್ಲ ಅದರ ಬದಲು ವಿಶ್ವನಾಥನ ಭವ್ಯ ದೇವಾಲಯವಾಗಿತ್ತು ಎಂದು ಹೇಳುವಂತಹ ಹಂತಕ್ಕೆ ತಂದು ಬಿಟ್ಟಿದೆ.

ಇದೀಗ ಭಾರತೀಯ ಪುರಾತತ್ವ ಸರ್ವೇಕ್ಷಣಾ (ಎ.ಎಸ್.ಐ) ಇಲಾಖೆಯು ಆ ಜಾಗದಲ್ಲೀಗ ಗ್ರೌಂಡ್ ಪೆನೆಟ್ರೇಟಿಂಗ್ ರಾಡಾರುಗಳ ಮೂಲಕ ನೆಲೆದಾಳದ ಚಿತ್ರವನ್ನು ತೆಗೆದು ತೋರಿಸಿದೆ. ಇಲಾಖೆಯು ನೀಡಿದ ವರದಿಯಂತೆ ಈಗಿರುವ ಮಸೀದಿಯೆನ್ನುವ ಕಟ್ಟಡದ ಮೊದಲು ಅಲ್ಲೊಂದು ದೇವಸ್ಥಾನವಿದ್ದಿತು ಎಂದು ಉಲ್ಲೇಖಿಸಿದೆ. ಈಗಿರುವ ಜ್ಞಾನವಾಪಿಯೆನ್ನುವ ಮಸೀದಿಯ ಪಶ್ಚಿಮದ ಗೋಡೆಯು ಕಲ್ಲು ಮತ್ತು ಅಲಂಕೃತ ಅಚ್ಚಿನ ಇಟ್ಟಿಗೆಗಳಿಂದ ನಿರ್ಮಿಸಲ್ಪಟ್ಟಿದೆ. ಪಶ್ಚಿಮ ಭಾಗದ ನಡುವಿನ ವಿಶಾಲ ಕೊಠಡಿಗಳು ಪಶ್ಚಿಮದ ಗೋಡೆಗೆ ತಗಲಿಕೊಂಡಿದ್ದು; ಅವು ಪ್ರಾರಂಭದಲ್ಲಿದ್ದ ದೇವಸ್ಥಾನದ ಭಾಗಗಳಾಗಿದ್ದು ಬದಲಾವಣೆಗಳಾಗದೆ ಉಳಿದುಕೊಂಡಿವೆ. ಅಲ್ಲಿರುವ ಅರಬ್ ಪರ್ಶಿಯನ್ ಲಿಪಿಗಳ ಕೆತ್ತನೆಗಳು ಆ ಮಸೀದಿಯನ್ನು ಔರಂಗಜೇಬನ ಆಳ್ವಿಕೆಯ 20ನೇ ವರ್ಷದಲ್ಲಿ ಎಂದರೆ ಕ್ರಿ.ಶ 1676–77ರಲ್ಲಿ ನಿರ್ಮಿಸಲಾಗಿರುವುದು ಎಂದು ಬರೆಯಲಾಗಿದೆ.

ಈಗ ಸಿಕ್ಕಿರುವ ಸಾಕ್ಷ್ಯಾಧಾರಗಳಂತೆ; ಮಸೀದಿಯನ್ನು ನಿರ್ಮಿಸಿರುವುದಲ್ಲ. ಅದರ ಬದಲು ಅಲ್ಲಿದ್ದ ದೇವಸ್ಥಾನವನ್ನು ಭಾಗಶಃ ಧ್ವಂಸಗೊಳಿಸಿ ಇನ್ನಷ್ಟನ್ನು ಮಾರ್ಪಡಿಸಿ, ಮತ್ತಷ್ಟನ್ನು ಹಾಗೇ ಉಳಿಸಿಕೊಂಡು ಮಸೀದಿಯೆಂದು ಕರೆಯಲಾಗಿದೆ. ಪುರಾತತ್ವ ಇಲಾಖೆಯು ನ್ಯಾಯಾಲಯದ ಆದೇಶದಂತೆ ಅಲ್ಲಿ ವೈಜ್ಞಾನಿಕವಾದ ಸರ್ವೇಕ್ಷಣೆಯನ್ನು ನಡೆಸಿತು. ಅಲ್ಲಿರುವ ಕಂಭಗಳನ್ನೂ ಛಾವಣಿಗಳನ್ನೂ ಕ್ರಮಬದ್ಧವಾಗಿ ಅಧ್ಯಯನಕ್ಕೆ ಒಳಪಡಿಸಿತು. ಕಂಭಗಳ ಮೇಲಿರುವ ಭಾರ ಹೊರುವ ಅಡ್ಡತೊಲೆಗಳನ್ನೂ ಪರೀಕ್ಷಿಸಿತು.ಅವೆಲ್ಲವುಗಳನ್ನು ಮಸೀದಿಯಾಗಿ ವಿಸ್ತರಿಸಲು ಮತ್ತು ಮುಂದಿನ ಪ್ರಾಂಗಣದ ನಿರ್ಮಾಣಕ್ಕೆ ಉಪಯೋಗಿಸಲಾಗಿತ್ತು. ಹೆಚ್ಚಿನ ಬದಲಾವಣೆಗಳನ್ನು ಮಾಡದಿರುವ ಭಾಗಗಳೂ ಇವೆ. ಅಲ್ಲೆಲ್ಲ ಮಸೀದಿಯಂತೆ ಗೋಚರಿಸಲು ಅಲ್ಲಿದ್ದ ಸರ್ಪಾಕೃತಿಯ ಬಳ್ಳಿಗಳನ್ನು ಕಮಲದ ಕೆತ್ತನೆಗಳನ್ನೂ ಭಿನ್ನಗೊಳಿಸಲಾಗಿದೆ. ಕಟ್ಟಡದ ಮೂಲೆಗಳ ಕಲ್ಲುಗಳನ್ನು ತೆಗೆದು ಅಲ್ಲಿ ಹೂವುಗಳ ಕೆತ್ತನೆಯನ್ನು ಮಾಡುವ ಪ್ರಯತ್ನಗಳಾಗಿವೆ.


ಕಂಭಗಳ ಮೇಲಿನ ಅಡ್ಡತೊಲೆಗಳು ಈಗ ಮೊದಲು ಇದ್ದಲ್ಲೇ ಇದ್ದುದರಿಂದ ಈ ನಿರ್ಣಯಕ್ಕೆ ಬರಲು ನೆರವಾಗಿದೆ.



ಇನ್ನು ನೆಲಮಾಳಿಗೆಯಲ್ಲಿ ಶೇಖರಗೊಂಡ ಅಗಾಧ ಮಣ್ಣಿನ ರಾಶಿಯ ಕೆಳಗೆ ಹಿಂದು ದೇವತೆಗಳಾದ ಗಣೇಶ, ಕೃಷ್ಣರ ಭಿನ್ನಶಿಲ್ಪ ಕೃತಿಗಳೂ ಕೆತ್ತನೆಗಳ ಭಾಗಗಳೂ ಹುಗಿದು ಹೋಗಿವೆ. ಒಳ ಭಾಗದಲ್ಲಿ ಕಾಣುವ ದೇವನಾಗರಿ, ಕನ್ನಡ ಮತ್ತು ತೆಲುಗು ಲಿಪಿಗಳ ಕೆತ್ತನೆಗಳನ್ನು ತಮಗೆ ಬೇಕಾದಂತೆ ತಿದ್ದುವ ಪ್ರಯತ್ನವನ್ನು ಮಾಡಿರುವುದು ಗೋಚರವಾಗುತ್ತದೆ. ಅದು ಈಗಿರುವ ಮಸೀದಿ ಕಟ್ಟಡದ ಉದ್ದೇಶಕ್ಕಾಗಿ ಮಾರ್ಪಡಿಸಿರುವುದಾಗಿದೆ. ವಾಯುವ್ಯದ ಭಾಗದಲ್ಲಿ ಒಂದು ಶಾಸನವಿದ್ದು ಅದರಲ್ಲಿ ಇಬ್ಬರು ನಮಸ್ಕರಿಸುವ ಕೆತ್ತನೆಯು ಕಂಡು ಬರುತ್ತದೆ. ಅದು ಕನ್ನಡ ಲಿಪಿಯಲ್ಲಿದ್ದು ದೊಡ್ಡರಸಯ್ಯ ಮತ್ತು ನರಸಂಣನ ಬಿನ್ನಹ (ಬಿಂನಹ) ಎಂದು ಕೊರೆಯಲಾಗಿದೆ. ಇದು ಕೆಳದಿಯ ವೀರ ನರಸಯ್ಯನು ಕಾಶಿಯ ವಿಶ್ವನಾಥನಿಗೆ ನೀಡಿದ ಉಂಬಳಿಯ ಕುರುಹು ಎಂದು ಕರ್ನಾಟಕ ಶಾಸನ ತಜ್ಞರ ಅಭಿಪ್ರಾಯವಾಗಿದೆ.







ನೆಲಮಾಳಿಗೆಯ ಛಾವಣಿಯ ಹಾಲುಗಲ್ಲಿನಲ್ಲಿ ದೇವನಾಗರಿ ಲಿಪಿಯಲ್ಲಿ ‘ರಾಮ’ ಎಂದು ಬರೆದ ಉಬ್ಬು ಕೆತ್ತನೆಯು ಸ್ಪಷ್ಟವಾಗಿ ಕಾಣುತ್ತದೆ. ಅದೇ ನೆಲಮಾಳಿಗೆಯಲ್ಲಿ ಭಗ್ನಗೊಂಡ ವಿಷ್ಣು ಮೂರ್ತಿಯ ವಿಗ್ರಹವು ದೊರಕಿದೆ. ಗದೆ ಎತ್ತಿದ ಆಂಜನೇಯನ ಭಿನ್ನವಿಗ್ರಹ, ಶ್ರೀಕಾರವನ್ನು ಬರೆದ ಶಿಲಾಭಾಗ, ಎಡಗಾಲು ಭಿನ್ನಗೊಂಡ ಶ್ರೀಕೃಷ್ಣನ ಮೂರ್ತಿ ಶಿವಲಿಂಗದ ಪಾಣಿ ಪೀಠವೂ ಚೆದುರಿಕೊಂಡಿದೆ. ಈವರೆಗೆ ಕೈತೊಳೆಯುವ ವಜ್ಹೂಖಾನೆಯಲ್ಲಿರುವುದು ಕಾರಂಜಿಯೆಂದು ಹೇಳಲಾಗಿತ್ತು. ಆದರೆ ಅದು ಶಿವಲಿಂಗದ ಭಾಗವೆಂದೂ ಧ್ವಂಸಗೊಂಡ ನಂದಿ ವಿಗ್ರಹಗಳು ಐತಿಹಾಸಿಕ ಮತ್ತು ಚಾರಿತ್ರಿಕ ಕುರುಹುಗಳಾಗಿ ಇಂತಹ ನಿಷ್ಕರ್ಷಗೆ ಬರುವಂತೆ ಮಾಡಿದೆ. ಎ.ಎಸ್.ಐ ಎಲ್ಲಾ ಸಾಕ್ಷ್ಯಾಧಾರಗಳನ್ನು ಒಟ್ಟಾಗಿಸಿ ಪೂರ್ಣ ಅಧ್ಯಯನದ ನಂತರ ಆ ಪ್ರದೇಶದಲ್ಲಿ





ವಿಶಾಲವಾದ ದೇವಸ್ಥಾನವೊಂದು ಇದ್ದಿತೆಂದೂ ಅದನ್ನು ಕೆಡವಿ ಅಥವಾ ಮಾರ್ಪಡಿಸಿ ಈಗಿರುವ ಮಸೀದಿಯಂತಹ ಕಟ್ಟಡವು ನಿರ್ಮಾಣವಾಗಿದೆಯೆಂದೂ ನಿಷ್ಕರ್ಷಿಸಿದೆ. ಮುಖ ಮಂಟಪ, ಮಹಾ ಮಂಟಪ, ಗರ್ಭಗೃಹಗಳ ಮೂಲ ಸ್ತಂಭಗಳ ರಚನೆ, ಕುಮದಾಕೃತಿಯ ಅಲಂಕೃತ ರಚನೆಗಳು, ಮೊಸಳೆಯಂತಹ ಆಕೃತಿಗಳು, ಜನಾರ್ದನ, ರುದ್ರ ಉಮೇಶ್ವರರ ಉಲ್ಲೇಖಗಳು, ಸೇರಿದ 532 ಪುಟಗಳ ವರದಿಯು ಅದನ್ನು ದೃಢಗೊಳಿಸಿದೆ. ಈಗ ಈ ವರದಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದೆ.



ಅಲ್ಲಿ ಮಸೀದಿಯೆಂದಿರುವ ಮೂಲ ದೇವಸ್ಥಾನದ ಪೂರ್ಣ ಪ್ರದೇಶವನ್ನು ಹಿಂದು ಸಮಾಜಕ್ಕೆ ಒಪ್ಪಿಸಬೇಕೆಂದು ವಿಶ್ವಹಿಂದು ಪರಿಷತ್ತಿನ ಕಾರ್ಯಾಧ್ಯಕ್ಷರಾದ ಅಲೋಕ್ ಕುಮಾರ್‌ರವರು ಆಗ್ರಹಿಸಿರುವರು. 1991ರ ಧಾರ್ಮಿಕ ಕಟ್ಟಡಗಳ ರಕ್ಷಾ ಕಾನೂನು ಸಾರುವಂತೆ ಆಯಾಕಾಲದ ಧಾರ್ಮಿಕ ಸ್ವಭಾವವನ್ನು ಗೌರವಿಸಬೇಕೆಂದು ಆಶಿಸಿರುವಂತೆ; ಅಲ್ಲಿ ಹಿಂದುಗಳಿಗೆ ಪೂಜೆಯನ್ನು ಮಾಡುವ ಅನುಮತಿಯನ್ನು ನೀಡಬೇಕೆಂದು ಅವರು ಒತ್ತಾಯಿಸಿದರು. ಅದು ಮಸೀದಿಯಲ್ಲವೆಂದು ಸಾಬೀತಾದ ಮೇಲೆ ಮಸೀದಿ ಆಡಳಿತ ಸಮಿತಿಯು ಮಸೀದಿಯನ್ನು ಸ್ಥಾನಾಂತರಿಸಿ ವಿಶ್ವನಾಥನ ಮೂಲ ಸ್ಥಾನವನ್ನು ಹಿಂದುಗಳಿಗೆ ನೀಡಬೇಕೆಂದು ಕರೆ ಕೊಟ್ಟರು.

**(ನ್ಯಾಯಾಲಯದಿಂದ ಹಿಂದುಗಳಿಗೆ ಪೂಜೆ ಮಾಡುವ ಅವಕಾಶದ ತೀರ್ಪು ಈಗ ತಾನೆ ಬಂದಿದೆ)**

# ದೇಶದ ಬೆನ್ನೆಲುಬು

ರಾಷ್ಟ್ರೀಯತೆ ಸದಾಕಾಲಕ್ಕೂ, ಸರ್ವದೇಶಗಳಿಗೂ ಸರ್ವರೀತಿಯ ಆಡಳಿತದಲ್ಲೂ, ಒಂದು ದೇಶದ ಬೆನ್ನೆಲುಬು, ಅಂತಹ ವಿದ್ಯಮಾನವಿದ್ದಲ್ಲಿ ರಾಷ್ಟ್ರಜೀವನದ ಎಲ್ಲ ರಂಗಗಳೂ, ಎಲ್ಲ ಪದ್ಧತಿಗಳೂ ವಿಕಸಿಸುವುದಲ್ಲದೆ, ಅದರ ಅಳಿವಿನಿಂದ ಎಲ್ಲ ವ್ಯವಸ್ಥೆಗಳೂ ಕುಸಿದುಬೀಳುತ್ತವೆ.

ಪ್ರಜಾಪ್ರಭುತ್ವದಲ್ಲಿ ಪ್ರತಿಯೋರ್ವನಿಗೂ ಮತದ ಅಧಿಕಾರವಿದೆಯಷ್ಟೆ. ಆದರೆ ಅವನು ಅದನ್ನು ಯೋಗ್ಯ ರೀತಿಯಲ್ಲಿ ಚಲಾಯಿಸುವುದು ಅವನಲ್ಲಿ ರಾಷ್ಟ್ರೀಯತೆ ಬೇರೂರಿದ್ದಾಗಲೇ, ಅನ್ಯಥಾ ಅವನು ರಾಷ್ಟ್ರೀಯತೆಯ ವಿರುದ್ಧವೇ ಮತ ನೀಡಿ ರಾಷ್ಟ್ರವನ್ನು ದುರ್ಬಲಗೊಳಿಸುತ್ತಾನೆ. ಪ್ರಜಾತಂತ್ರದಲ್ಲಿ ಒಬ್ಬ ಚುನಾಯಿತ ಶಾಸಕನಲ್ಲೂ ರಾಷ್ಟ್ರೀಯತೆ ಪ್ರಬಲವಾಗಿದ್ದಾಗ ಅವನು ರಾಷ್ಟ್ರದ ಏಳಿಗೆಗಾಗಿ ಕೆಲಸ ಮಾಡುತ್ತಾನೆ. ಅನ್ಯಥಾ ಅವನ ಕೈಯಿನ ಅಧಿಕಾರ ದುರ್ವ್ಯಯವಾಗುತ್ತದೆ. ಮತದಾರ ಲಂಚದ ಆಸೆಗಾಗಿ ಮತನೀಡುವಂತೆ, ಶಾಸಕನೂ ತನ್ನ ವ್ಯಕ್ತಿಸ್ವಾರ್ಥದ ಪೂರೈಕೆಗಾಗಿ ರಾಷ್ಟ್ರದ ಸಾಧನ ಸಂಪತ್ತನ್ನು ಬಳಸಿಕೊಳ್ಳುತ್ತಾನೆ. ಪ್ರಜಾತಂತ್ರದಲ್ಲಿ ಸಹ ರಾಷ್ಟ್ರೀಯತೆಯೇ ಪ್ರಥಮ; ಪ್ರಜಾ ಸ್ವಾತಂತ್ರ್ಯದ ಸ್ಥಾನ ಎರಡನೆಯದು.

**– ಹೊ.ವೆ. ಶೇಷಾದ್ರಿ**

# ಕ್ರೈಸ್ತರಲ್ಲಿ ಕಾಣುವ ಅಸಮಾನತೆ ಅದನ್ನೂ ಬಂಡವಾಳವಾಗಿಸುವ ಅಮಾನವೀಯತೆ

'ನಮ್ಮಲ್ಲಿ ಜಾತಿಯ ಪರಿಗಣನೆಯೇ ಇಲ್ಲ. ಆದ್ದರಿಂದ ಮತಾಂತರಗೊಂಡು ಕ್ರೈಸ್ತರಾಗಿರಿ' ಎನ್ನುವ ಕ್ರೈಸ್ತರಲ್ಲೀಗ ಜಾತಿ ತಾರತಮ್ಯದ, ಮೇಲು ಕೀಳುಗಳ ಒಡಕು ತಾರಕಕ್ಕೆ ಏರಿದೆ. ತಮಿಳುನಾಡಿನ ಕ್ರೈಸ್ತಪಾದ್ರಿಗಳ ಒಳಗೂ ಈಗ ದಲಿತ ಪಾದ್ರಿಗಳನ್ನು ಸಮಾನವಾಗಿ ಕಾಣಬೇಕೆನ್ನುವ ಕೂಗು ಸಾರ್ವತ್ರಿಕವಾಗಿದೆ. ಈಚೆಗೆ ನಿವೇದಿತಾಲೂಯಿಸ್ ಬರೆದ 'ಕ್ರೈಸ್ತುವದಿಲ್ ಜಾತಿ' (ಕ್ರೈಸ್ತರಲ್ಲಿ ಜಾತಿ) ಕೃತಿಯನ್ನು ಲೋಕಸಭಾ ಸದಸ್ಯ ತೋಲ್ ತಿರುಮಾವಲವನ್ ಲೋಕಾರ್ಪಣೆಗೈದರು. ಆಗಿನಿಂದಂತೂ ಕ್ರೈಸ್ತರಲ್ಲಿ ಜಾತಿ ವಿಚಾರಕ್ಕೆ ರಾಜಕೀಯ ಆಯಾಮವೂ ದೊರಕಿತು. ಈ ಸಂಸದರು 'ವಿಡುತಲೈ ಚಿರತೆಗಳ್ ಕಚಿ' ಎನ್ನುವ ದಲಿತ ಸಮೂಹದ ರಾಜಕೀಯ ಪಕ್ಷದವರು. ಅವರು ಆ ಪುಸ್ತಕವನ್ನು ಬಿಡುಗಡೆಗೊಳಿಸುತ್ತಾ ಅವರು ಮಾತನಾಡಿದುದು ಗಮನಾರ್ಹವಾಗಿದ್ದಿತು. 'ಸಮಾಜದಲ್ಲಿ ಒಂದಿಷ್ಟೂ ಮೂಲಭೂತವಾಗಿ ಒಳ್ಳೆಯ ಬದಲಾವಣೆಗಳನ್ನು ತಾರದೆಯೇ ಕ್ರೈಸ್ತಮತವು ಭಾರತದಲ್ಲಿ ಬೇರು ಬಿಟ್ಟಿದೆ. ಇದು ವಿಚಿತ್ರವಾದ ಸಾಮಾಜಿಕ ಸ್ಥಿತಿ. ಅಷ್ಟೇ ಅಲ್ಲ ಅಪೇಕ್ಷಿತವಾಗಿರದ ಜಾತಿಯ ಬೇರುಗಳು ಕ್ರೈಸ್ತಮತವನ್ನು ಬೆಳೆಸುತ್ತಿವೆ. ಕ್ರೈಸ್ತಮತದ ಮೌಲ್ಯಗಳ ಕುರುಹುಗಳೇ ಕ್ರೈಸ್ತರಲ್ಲಿ ಕಾಣಬರವು ಎಂದು ಆ ದಿನದಂದು ಅವರು ಮಾತನಾಡಿದರು.




ಕ್ರೈಸ್ತ ಮತದಲ್ಲಿ ಕಾಣುವ ತೀವ್ರ ಅಸಮಾನತೆಗಳನ್ನು ಬಹಿರಂಗಪಡಿಸಲು ಈಗ ತಮಿಳು ಸಾಹಿತ್ಯಕ್ಷೇತ್ರವು ಹೊರಟಂತಿದೆ. ಬಹುವಾಗಿ ಮೆಚ್ಚುಗೆಯನ್ನು ಪಡೆದ ಬಾಮರವರ ಕೃತಿ 'ಕಾರುಕ್ಕು' ಆತ್ಮಚರಿತ್ರೆಯು ಕ್ರೈಸ್ತ ಸಮಾಜದಲ್ಲೂ ಮತ್ತು ಕ್ರೈಸ್ತ ಸಂಸ್ಥೆಗಳಲ್ಲೂ ಅನುಭವಿಸಿದ ಜಾತಿ ತಾರತಮ್ಯದ ದಬ್ಬಾಳಿಕೆಯಿಂದ ಅವರು ಭ್ರಮ ನಿರಸನಗೊಂಡಿರುವುದನ್ನು ವಿವರಿಸುತ್ತದೆ. ಯಾತಿರೈ (ಯಾತ್ರಿ) ಕಾದಂಬರಿಯ ಲೇಖಕ ಫಾದರ್ ಮಾರ್ಕ್ ಸ್ಟೀವನ್‌ರವರು ಚರ್ಚ್‌ಗಳ ಆಡಳಿತದಲ್ಲೂ ಚರ್ಚಿನ ಜಾತ್ರೆಗಳ ಮತ್ತು ಹಬ್ಬಗಳ ಆಚರಣೆಯಲ್ಲಿ ದಲಿತರ ಅಧಿಕಾರವನ್ನೂ ಹಕ್ಕುಗಳನ್ನೂ ದಮನಿಸುವ ಪ್ರಸಂಗಗಳನ್ನು ವರ್ಣಿಸಿರುವವರು. ಸ್ಟೀವನ್ ತಮ್ಮ ಮೊದಲ ಕಾದಂಬರಿ 'ಸುವರ್‌ಗಳ್' (ಗೋಡೆಗಳು) ದಲಿತರ ಮತ್ತು 'ಮೇಲುಜಾತಿ'ಯ ಕ್ರೈಸ್ತರ ಗೋರಿಗಳನ್ನು ಪ್ರತ್ಯೇಕಿಸುವ ಗೋಡೆಯನ್ನು ಉರುಳಿಸಬೇಕೆಂದು ಸಾರುತ್ತದೆ.

ಈ ಸಂಘರ್ಷವೀಗ ಉಳಿದ ಕ್ಷೇತ್ರಗಳಿಗೂ ಹಬ್ಬಿದೆ. 1922ರಲ್ಲಿ ಕಾಂಚಿಪುರದ ತಾಜೂರು ಗ್ರಾಮದಲ್ಲಿ ಕಟ್ಟಿದ ಆರೋಗ್ಯಮಾತಾ ಚರ್ಚ್; ಮುಂದುವರಿದ ರೆಡ್ಡಿಯರ್ ಕ್ರೈಸ್ತರಿಗೂ ಮತ್ತು ದಲಿತ ಕ್ರೈಸ್ತರ ಎರಡು ಗುಂಪುಗಳ ನಡುವಿನ ವ್ಯಾಜ್ಯದಿಂದ ಹತ್ತು ವರ್ಷಗಳ ಕಾಲ ಮುಚ್ಚಿರಬೇಕಾಯಿತು. ಇಬ್ಬರು ದಲಿತ ಕ್ರೈಸ್ತರನ್ನು ಮಣ್ಣು ಮಾಡುವ ಬಗ್ಗೆ ಪ್ರಾರಂಭವಾದ ಸಂಘರ್ಷದಿಂದ ಐದು ವರ್ಷಗಳಾದರೂ ಅಂದಿನ ಬಿಗು ವಾತಾವರಣವಿನ್ನೂ ತಿಳಿಯಾದಂತಿಲ್ಲ. ಆಗಾಗ್ಗೆ ಪೋಲಿಸರು ಆಗಮಿಸುತ್ತಲೇ ಇರಬೇಕಾಗಿ ಬಂದಿದೆ. ಇಲ್ಲಿಗೆ 1836ರಲ್ಲೇ ಮೊದಲ ವಿದೇಶಿ ಕ್ರೈಸ್ತರ ಆಗಮನವಾಗಿದ್ದಿತು.

ತಮಿಳುನಾಡು ಮತ್ತು ಪುದುಚೇರಿಗಳ ದಲಿತ ಕ್ರೈಸ್ತರ ಬಿಡುಗಡೆ ಚಳುವಳಿಯ ನಾಯಕರು 1999ರ ನವೆಂಬರಿನಲ್ಲಿ ಭೇಟಿ ನೀಡಲಿದ್ದ ಎರಡನೇ ಪೋಪ್ ಪಾಲರನ್ನು ಭೇಟಿಯಾಗಿ ಸಮಸ್ಯೆಗಳನ್ನು ಅವರ ಗಮನಕ್ಕೆ ತರಲು ನಿರ್ಧರಿಸಿದ್ದರು. 2006ರಲ್ಲಿ ಮೂರು ಗುಂಪುಗಳ ನಡುವಿನ ಪಂಚಾಯಿತಿಯ ನಂತರ ಒಂದು ಶಾಂತಿ ಒಪ್ಪಂದವಾಗಿದ್ದರೂ ಅಶಾಂತಿಯು ಶಮನವಾಗಿರಲಿಲ್ಲ.

ಕ್ಯಾಥೋಲಿಕ್ ಕ್ರೈಸ್ತರಲ್ಲಿ ದಲಿತ ಕ್ರೈಸ್ತರು ಬಹುಸಂಖ್ಯಾತರು. ಆದರೆ ಅವರ ನಡುವೆ ಪಾದ್ರಿಗಳಾದವರು ಬೆರಳೆಣಿಕೆಯಷ್ಟೇ ದಲಿತ ಜನರು. ಬಿಷಪರಂತೂ ಶೂನ್ಯವೇ. ಚರ್ಚುಗಳಲ್ಲಿ ನಡೆಯುವ ಪೂಜಾ ನೇತೃತ್ವದಲ್ಲೂ. ಚರ್ಚ್‌ಗಳ ಆಡಳಿತ ನೇಮಕಾತಿಯಲ್ಲೂ ದಲಿತ ಕ್ರೈಸ್ತರನ್ನು ಕಡೆಗಣಿಸಲಾಗುತ್ತದೆಯೆಂದು ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನಾ ಸಮಿತಿಯು ಆಕ್ಷೇಪವೆತ್ತಿದೆ. ಒಂದೇ ಗ್ರಾಮದಲ್ಲಿ ದಲಿತ ಕ್ರೈಸ್ತರಿಗೂ ಉಳಿದವರಿಗೂ ಪ್ರತ್ಯೇಕವಾಗಿ ಚರ್ಚುಗಳ ನಿರ್ಮಾಣವಾಗುತ್ತಿವೆ.

2016ರಲ್ಲಿ ಕ್ಯಾಥೋಲಿಕ್ ಚರ್ಚ್‌ಗಳ ದಲಿತ ಸಬಲೀಕರಣ ನೀತಿ ನಿರ್ಧಾರ ಸಮಿತಿಯು ದಾಖಲಿಸಿದಂತೆ; ಚರ್ಚುಗಳ ನೇತೃತ್ವವನ್ನು ವಹಿಸುವುದರಲ್ಲಾಗಲೀ, ಚರ್ಚುಗಳಲ್ಲಿ ನಡೆಯುವ ಪೂಜಾನಡಾವಳಿಕೆಗಳಲ್ಲಾಗಲೀ, ಧಾರ್ಮಿಕ ಸಭೆಯ ಪಾತ್ರದ ಕೆಳಸ್ತರಗಳಲ್ಲಿ ದಲಿತರ ಪಾತ್ರವು ನಗಣ್ಯವಾಗಿದ್ದರೆ; ಮೇಲಿನ ಮಟ್ಟದಲ್ಲಿ ಅದು ಇಲ್ಲವೇ ಇಲ್ಲವೆನ್ನಬೇಕು! ತಮಿಳುನಾಡು, ಅಲ್ಪಸಂಖ್ಯಾತ ಆಯೋಗದ ಎಮ್, ಪ್ರಕಾಶರವರು ಹತ್ತು ವರ್ಷಗಳ ಹಿಂದೆಯೇ ಮಾತನಾಡುತ್ತಾ ಚರ್ಚುಗಳಲ್ಲಿ ದಲಿತ ಕ್ರೈಸ್ತರ ಬಗ್ಗೆ ತಾರತಮ್ಯದ ಧೋರಣೆಯು ಇದೆ. ಎಂದು ಸಾರ್ವಜನಿಕವಾಗಿ ಹೇಳಿದ್ದರು. ಇಂತಹ ಸ್ಥಿತಿಯಲ್ಲಿ ಅದನ್ನು ಒಂದು ಕುಟುಂಬದ ನಡುವಿನ ಕಲಹವೆನ್ನುವಂತೆ ಪರಿಗಣಿಸಿ, ಆಂತರಿಕವಾಗಿ ಪರಿಹರಿಸಿಕೊಳ್ಳಬೇಕಲ್ಲದೆ, ಅದರಲ್ಲಿ ಸರ್ಕಾರವಾಗಲೀ, ಆಯೋಗವಾಗಲೀ, ಮಧ್ಯಪ್ರವೇಶಿಸುವುದು ಸಾಧುವಲ್ಲವೆಂದು ಅವರು ಅಭಿಪ್ರಾಯ ಪಟ್ಟಿದ್ದರು.

ರೋಮನ್ ಕ್ಯಾಥೋಲಿಕ್ ಚರ್ಚುಗಳ ಈ ನಿಲುವನ್ನು ಪ್ರಶ್ನಿಸಿ ಸಂತ್ರಸ್ತರು ನ್ಯಾಯಾಲಯಗಳಿಗೂ ಹೋದ ಸಂದರ್ಭಗಳಿವೆ. ಚರ್ಚ್‌ಗಳಲ್ಲಿ ಸಮಾನ ಪ್ರಾತಿನಿಧ್ಯವಿರಬೇಕೆಂದು ಪ್ರಾರ್ಥಿಸುತ್ತಾ, 18 ಡಯೋಸಿಸ್‌ಗಳಲ್ಲಿ ಒಬ್ಬನೇ ಒಬ್ಬ ದಲಿತ ಬಿಷಪರನ್ನು ನೇಮಿಸಲಾಗಿದೆ ಎಂದು ಉಲ್ಲೇಖಿಸಿ ಶ್ರೀವಲ್ಲೀಪುರಮಿನ ಅಂಬರಸನ್‌ರವರು ಉಚ್ಚನ್ಯಾಯಾಲಯದ ಮಧುರೈ ಪೀಠಕ್ಕೆ ಪ್ರಾರ್ಥಿಸಿದ್ದರು. ಸರ್ಕಾರವು ಸಮಾನ ಪ್ರಾತಿನಿಧ್ಯವನ್ನು ನೀಡುವಂತೆ ಆದೇಶಿಸಲು ಅರಿಕೆಯನ್ನು ಮಾಡಿಕೊಂಡಿದ್ದರು. 2021ರಲ್ಲಿ ನ್ಯಾಯಾಲಯವು ಈ ಕುರಿತು ಮತ್ತು ರಾಜ್ಯ ಸರ್ಕಾರಗಳಿಗೆ ಸೂಕ್ತ ಸೂಚನೆಯನ್ನು

ನೀಡಿದ್ದಿತು. ಅದೇ ರೀತಿ ತಮಿಳುನಾಡು ಬಿಷಪ್ಪರ ಸಭೆಗೂ, ಪೋಪರ ಭಾರತ ವ್ಯಾಪ್ತಿಯ ಸಮಿತಿಗೂ ಆದೇಶಿಸಿತು. ಅವೆಲ್ಲವೂ ಈಗ ವಿಚಾರಣೆಗಳ ಹಂತದಲ್ಲಿವೆ.

ತಿರುಮಾವಲವನ್ ಪ್ರಕಾರ ಇದು ಕ್ರೈಸ್ತ ಮತದ ತಪ್ಪು ಅಲ್ಲವೆಂದಾದರೆ ಅದು ಇನ್ನಾರ ತಪ್ಪು? ತಮ್ಮಲ್ಲಿ ಜಾತಿಯೇ ಇಲ್ಲವೆಂದು ಕ್ರೈಸ್ತಮತದ ಪರವಾಗಿ ಸಾರುವುದು ಕ್ರೈಸ್ತಮತದ ತಪ್ಪು ತಾನೇ? ಆ ನಂತರ ಜಾತಿಯನ್ನು ಪ್ರವೇಶಿಸಲು ಬಿಡಲು ಕಾರಣವಾದ ತಪ್ಪನ್ನು ತಿದ್ದಲಿಲ್ಲವೆಂದಾದರೆ ಅದು ಇನ್ನು ಯಾರ ತಪ್ಪಾಗುತ್ತದೆ? ಹಿಂದು ಧರ್ಮದಲ್ಲಿ ಮೇಲು ಕೀಳುಗಳೆಂಬ ವ್ಯತ್ಯಾಸವಿದೆಯೆಂದು ತುಂಬು ಕಂಠದಿಂದ ದೂರುವ ಕ್ರೈಸ್ತಪಾದ್ರಿಗಳು, ತಮ್ಮಲ್ಲಿಗೆ ಬಂದರೆ ಸಮಾನತೆಯ ಗಾಳಿಯನ್ನು ಉಸಿರಾಡಬಹುದೆಂದು ಹೇಳುವವರು ಮತಾಂತರಗೊಂಡವರಿಗೆ ಹೊಸದೇನು ಕೊಟ್ಟರು? ಹಿಂದು ಧರ್ಮದ ಗುರುಗಳು, ಮುಖಂಡರ ಜೊತೆಯಲ್ಲಿ ಕೈಜೋಡಿಸಿದ ಹಿಂದು ಸಮಾಜವಿಡೀ ಈಗ ಈ ಎಲ್ಲ ಕಳಂಕಗಳನ್ನು ದೂರವಿಡಲು ಶಕ್ತವಾಗಿದೆ. ಈ ಹೊತ್ತಿನಲ್ಲಿ ಅಂತಹ ಹೀನಭಾವನೆಯನ್ನು ಮುಂದುವರಿಸುತ್ತಿರುವ ಕ್ರೈಸ್ತಮತವನ್ನು ಯೇಸುವು ಅದೆಂತು ಸಹಿಸುವನೋ? ■

## ರಾಷ್ಟ್ರೀಯತೆಯ ಮೌಲ್ಯ

ಗಣಿತದಲ್ಲಿ 1ರ ಪಕ್ಕದಲ್ಲಿ 1ನ್ನು ಬರೆದಲ್ಲಿ ಮುಂಚಿಗಿಂತ ಅದಕ್ಕೆ ಹತ್ತರಷ್ಟು ಹೆಚ್ಚು ಬೆಲೆ. ಹೀಗೆ ಅದರ ಪಕ್ಕದಲ್ಲಿ 1ನ್ನು ಪುನಃ ಬರೆಯುತ್ತಾ ಹೋದಂತೆ ಹತ್ತರಷ್ಟು ಹೆಚ್ಚು ಬೆಲೆ ಅದಕ್ಕೆ ಪ್ರಾಪ್ತವಾಗುತ್ತಾ ಹೋಗುತ್ತದೆ. ಇದರಂತೆಯೇ ವ್ಯಕ್ತಿ, ಸಮಾಜ, ರಾಷ್ಟ್ರಗಳೊಂದಿಗೆ ರಾಷ್ಟ್ರೀಯತೆ ಇದ್ದಷ್ಟೂ ಅದಕ್ಕೆ ಬೆಲೆ, ಗೌರವ ಹೆಚ್ಚುತ್ತಾ ಹೋಗುತ್ತದೆ. ರಾಜನೈತಿಕ ಪಕ್ಷಗಳ ಗುರಿ ಸಹ ರಾಷ್ಟ್ರೀಯತೆಯನ್ನು ಕಾಪಾಡುವುದೇ ಆಗಿದೆ. ಏಕೆಂದರೆ ರಾಜನೀತಿ ಇರುವುದೇ ರಾಷ್ಟ್ರೀಯತೆಯ ಸಂರಕ್ಷಣೆ, ಸಂವರ್ಧನೆಗಾಗಿ. ಒಂದು ದೇಶದ ವಿದ್ಯೆ, ಸಂಪತ್ತು, ಬೇಸಾಯ, ಕೈಗಾರಿಕೆ ಇವಕ್ಕೆಲ್ಲಾ ಹೆಚ್ಚಿನ ಬೆಲೆ ಸಿಗುವುದು ರಾಷ್ಟ್ರೀಯತೆಯು ಪ್ರಬಲವಾಗಿ ಇರುವಾಗಲೇ.


ಹಿಂದುವಾಣಿಗೆ ಚಂದಾದಾರರಾಗಲು

ವಾರ್ಷಿಕ ಚಂದಾ ರೂ. 130/– ಅಥವಾ ದ್ವೈವಾರ್ಷಿಕ ಚಂದಾ ರೂ. 250/–ರ ಎಂ.ಓ./ಡಿ.ಡಿ.ಗಳನ್ನು "ಹಿಂದುವಾಣಿ" ಹೆಸರಿನಲ್ಲಿ ಕಳುಹಿಸಬಹುದು

ಅಥವಾ

ಕರ್ನಾಟಕ ಬ್ಯಾಂಕ್, ಚಾಮರಾಜಪೇಟೆ ಶಾಖೆ, ಬೆಂಗಳೂರು.
ಖಾತೆ ಹೆಸರು : "ಹಿಂದುವಾಣಿ" A/c No: 0582500102391901ಕ್ಕೆ ವರ್ಗಾಯಿಸಬಹುದು.

I.F.S.C Code : KARB0000058

ನಂತರ 9663881653 ಮೊಬೈಲಿಗೆ ಅಥವಾ ದೂರವಾಣಿ 080–26604641ಕ್ಕೆ ಕರೆ ಮಾಡಿ ತಮ್ಮ ಪೂರ್ಣ ವಿಳಾಸವನ್ನು ತಿಳಿಸಬೇಕು.



# ಮೌನ ತಪಸ್ವಿ ಚಂದ್ರಶೇಖರಯ್ಯನವರು

– ಟಿ.ಎ.ಪಿ. ಶೆಣೈ

ಬೆಂಗಳೂರಿನ ಹಿರಿಯ ಕಾರ್ಯಕರ್ತರಾಗಿದ್ದ ಚಂದ್ರಶೇಖರಯ್ಯನವರು ನಿಧನರಾದರು. ಅವರೊಂದಿಗಿನ ದಶಕಗಳ ಒಡನಾಟಗಳಿನ್ನು ನೆನಪುಗಳಾಗಿ ಉಳಿಯುತ್ತವೆ. ಅವರು ವಿಶ್ವ ಹಿಂದು ಪರಿಷದ್ ಸಂಪರ್ಕದಲ್ಲಿ ಬಂದಾಗ ರಾಮಜನ್ಮಭೂಮಿ ಆಂದೋಲನವು ಉತ್ಕಟ ಹಂತವನ್ನು ತಲುಪಿದ್ದಿತು. ಆಗ ಅದೊಂದು ತಾತ್ತ್ವಿಕ ಸಂಘರ್ಷವಾಗಿ ಮಾರ್ಪಟ್ಟ ಸಂಧಿಕಾಲ.

ಇಂತಹದೊಂದು ಸಂಘರ್ಷಕ್ಕೆ ಹೇಳಿ ಮಾಡಿಸಿದ ಕಾರ್ಯಕರ್ತರಂತೆ ಇದ್ದವರು ಚಂದ್ರಶೇಖರಯ್ಯ. ಅವರ ಅಧ್ಯಯನ, ಅವರ ಜೀವನಾನುಭವದೊಂದಿಗೆ ವೇದಿಕೆ, ಭಾಷಣ, ಫೋಟೋಗಳ ಜಂಜಾಟದಲ್ಲಿ ಸಿಲುಕದ ಮನಸ್ಸಿನಿಂದ ಅವರು ಈ ಆಂದೋಲನದ ಸಂಪನ್ಮೂಲ ವ್ಯಕ್ತಿಯಾಗಿ ಮಾರ್ಪಟ್ಟರು. ಹಿಂದು ಧರ್ಮ ಮತ್ತು ಹಿಂದುತ್ವದ ವೈಚಾರಿಕ ಆಯಾಮಗಳನ್ನು ಮನದಟ್ಟು ಮಾಡುವ ನಿವಾಸಿ ಶಿಬಿರಗಳಲ್ಲಿ ಭಾಗವಹಿಸುವ ಮುಂದಿನ ಸಾಲಿನ ಶಿಬಿರಾರ್ಥಿಗಳಾಗಿ ಚಂದ್ರಶೇಖರಯ್ಯ ದಂಪತಿಗಳು ಇರುತ್ತಿದ್ದರು. ಇದರೊಂದಿಗೆ ರಾಮಾಯಣ ಮತ್ತು ಮಹಾಭಾರತ ಉಪನ್ಯಾಸಕ ತರಬೇತಿಗಾಗಿ ನಡೆಯುತ್ತಿದ್ದ ಶಿಬಿರಗಳಲ್ಲೂ ಭಾಗವಹಿಸಿ ತಮ್ಮ ವಿಚಾರಗಳಿಗೆ ಐತಿಹಾಸಿಕ ಮತ್ತು ಆಧ್ಯಾತ್ಮಿಕ ಮೆರಗನ್ನು ಗಳಿಸಿಕೊಂಡರು. ಇನ್ನೊಂದು ಮಗ್ಗುಲಲ್ಲಿ ಶಿಬಿರದ ವ್ಯವಸ್ಥೆಯ ಖರ್ಚು ವೆಚ್ಚಗಳನ್ನು ಭರಿಸುವಲ್ಲೂ ಅವರು ಮುಂದೆ ನಿಂತು ಅದನ್ನು ನಿಭಾಯಿಸುವ ಹೊಣೆಯನ್ನು ಹೊತ್ತರು,

ಸಾಮರಸ್ಯದ ಹಾದಿಯಾಗಿ ಯೋಜಿಸಿದ ಕಾಗಿನೆಲೆಯ ಕನಕದಾಸ ಜಯಂತಿ ಸಂಗೀತೋತ್ಸವವನ್ನು ಸಂಗೀತ ಮತ್ತು ತತ್ವಚಿಂತನೆಯ ಗಡಿಯನ್ನು ದಾಟಿ ಹೊಸ ಅಭಿರುಚಿಯನ್ನು ನಿರ್ಮಿಸುವಲ್ಲಿ ತಮ್ಮ ಕರ್ತೃತ್ವಶಾಲಿ ಕ್ರಿಯಾಶೀಲತೆಯನ್ನೂ ಅವರು ವಿನಿಯೋಗಿಸಿದರು. ಆಗಿನ್ನೂ ವಿಶ್ವ ಹಿಂದು ಪರಿಷತ್ತಿನಲ್ಲಿ ಸತ್ಸಂಗದ ಕಾರ್ಯಚಟುವಟಿಕೆಯ ಕಲ್ಪನೆಯು ಪ್ರಾರಂಭವಾಗಿರಲಿಲ್ಲ. ಅಂತಹ ಪರಿಸರದಲ್ಲಿ ಆಗಲೇ ವಿವಿಧ ಚಿಂತನೆಗಳ ನೆಲೆಯಲ್ಲಿ  ಸತ್ಸಂಗಗಳು ಬೆಂಗಳೂರಿನಲ್ಲಿ ಪ್ರಾರಂಭವಾದವು. ಭಗವದ್ಗೀತೆಯ ಸತ್ಸಂಗಗಳು ಅಮ್ಮಾಯಿಯವರ ಹಿರಿತನದಲ್ಲಿ ಮಹಾನಗರದಾದ್ಯಂತ ಸಾಂಗವಾಗಿ ನಡೆಯುತ್ತಿದ್ದರೆ. ಲಕ್ಷ್ಮೀದೇವಿಯವರ ಟೋಲಿಗಳು ಹಲವು ಸ್ತೋತ್ರ ಮಾಲಿಕೆಗಳ ಸತ್ಸಂಗಗಳನ್ನು ಮುನ್ನಡೆಸುತ್ತಿದ್ದವು. ಇಂತಹ ನೂರಕ್ಕೂ ಸಮೀಪದಲ್ಲಿ ಸತ್ಸಂಗಗಳು ಆಗಲೇ ಬೆಂಗಳೂರು ಮಹಾನಗರದಲ್ಲಿ ನೆಲೆಯೂರಿದ್ದವು.

ಅವೆಲ್ಲವುಗಳ ತಾಲೀಮು ಮತ್ತು ಮೊದಲ ಪ್ರದರ್ಶನಗಳು ರೂಪುಗೊಳ್ಳುತ್ತಿದ್ದುದು ಜಯನಗರದ ಚಂದ್ರಶೇಖರಯ್ಯನವರ ಮನೆಯಲ್ಲಿ. ಗೀತಾಜಯಂತಿಯ ಭಗವದ್ಗೀತೆ ಪಾರಾಯಣದ ಹಲವು ಬೈಠಕ್‌ಗಳು ಅವರ ಮನೆಯಲ್ಲೇ ನಡೆದು ಅದೊಂದು ನಿಶ್ಚಿತ ಪ್ರಾರೂಪ ಪಡೆಯಿತು. ಚಂದ್ರಶೇಖರಯ್ಯನವರೊಂದಿಗೆ ಇರುವುದೆಂದರೆ ಅದೊಂದು ಸಾತ್ವಿಕ ಪರಿಸರದ ತಾತ್ವಿಕ ಸಂವಾದ ಗೋಷ್ಠಿ. ಅವರ ನೆನಪುಗಳನ್ನು ಮೆಲುಕು ಹಾಕುವುದು ಒಂದು ಸತ್ಸಂಗದ ಅವಧಿಯಂತಹ ಅನುಭವ. ಅವರ ಅಗಲುವಿಕೆಯಿಂದ ಜಯನಗರ ಭಾಗದ ಹಿರಿಯ ಜೊತೆಗಾರರನ್ನು ಕಳೆದು ಕೊಂಡತಾಗಿದೆ. ಅವರ ಸದ್ಗತಿಗಾಗಿ ಪ್ರಾರ್ಥಿಸುತ್ತೇವೆ.

# ಧರ್ಮ ರಕ್ಷಣೆಗಾಗಿ ಶಕ್ತಿಯುಕ್ತಿಗಳ ಸಾಧನೆ

**–ಕಟೀಲು ದಿನೇಶ ಪೈ, ಮಂಗಳೂರು**

ಧರ್ಮ ರಕ್ಷಣೆಗೆ ಬಲಿದಾನ ನೀಡಿದ ಲಕ್ಷಾಂತರ ಪುಣ್ಯವಂತ ಧೀರ ಜನರು ಆಗಿ ಹೋಗಿದ್ದಾರೆ. ಹಾಗೆಯೇ, ಜೀವನ ಪೂರ್ತಿ ಸವೆಯಿಸಿ ಕೃತಾರ್ಥರಾದ ಲಕ್ಷಾಂತರ ಜನರೂ ಸೇವೆ ಸಲ್ಲಿಸಿ ಹೋಗಿದ್ದಾರೆ. ಈಗಲೂ ಸಾವಿರಾರು ಜನರು ಸನಾತನ ಧರ್ಮ ರಕ್ಷಣೆಗೂ ಬಲಿದಾನಕ್ಕೂ ಸಿದ್ಧರಾಗಿರುವವರು ಇದ್ದಾರೆ. ಜೀವನವನ್ನು ಮುಡಿಪಾಗಿಟ್ಟು ಕಾರ್ಯವೆಸಗುತ್ತಿದ್ದಾರೆ. ಇನ್ನಷ್ಟು ಜನರು ಜೀವನವನ್ನು ಸವೆಸಲು ಸದಾ ಸಿದ್ಧರಾಗಿದ್ದಾರೆ.

ಇಂತಹ ಜೀವನದಾನ, ಬಲಿದಾನಗಳು ಪರಿಣಾಮಕಾರಿಯಾಗಲು ಸನಾತನ ವ್ಯವಸ್ಥೆಯಲ್ಲಿ ಶಕ್ತಿಯುಕ್ತಿಗಳನ್ನು ಹೊಂದಲು ಸಾವಿರಾರು ವಿಧಾನಗಳನ್ನು ಹೇಳಲಾಗಿದೆ. ಅದಕ್ಕಾಗಿ ಜೀವನವನ್ನೂ ಪ್ರಾಣವನ್ನೂ ಕೊಡಲು ಸಿದ್ಧರಿರುವ ಕಾರ್ಯಕರ್ತರು ತಮಗೆ ಸೂಕ್ತವಾಗುವ ವಿಧಾನಗಳನ್ನು ಆರಿಸಿ ಅತ್ಯಂತ ಗರಿಷ್ಟ ಪ್ರಮಾಣದಲ್ಲಿ ಧರ್ಮರಕ್ಷಾ ಕಾರ್ಯಗಳು ಪರಿಣಾಮಕಾರಿಯಾಗುವಂತೆ ನೋಡಿಕೊಳ್ಳುವುದು ಜಾಣತನ. ಅದು ಅನಿವಾರ್ಯ ಕೂಡಾ. ಕೇವಲ ಭಾವನಾತ್ಮಕವಾಗಿ ಆಗುವ ಬಲಿದಾನಕ್ಕಿಂತ ಯೋಜಿತ ರೀತಿಯು ಧರ್ಮರಕ್ಷಣೆಗೆ ಅಗತ್ಯ. ವಿದ್ಯಾರಣ್ಯರು ತಪಸ್ಸಿನ ಬಲದಿಂದ ಹಕ್ಕ ಬುಕ್ಕರ ಮುಖೇನ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದ್ದು, ಸಮರ್ಥ ರಾಮದಾಸರು ಶಿವಾಜಿ ಮಹಾರಾಜರ ಮೂಲಕ ಹಿಂದವಿ ರಾಜ್ಯ ಸ್ಥಾಪಿಸಿದ್ದು ಶಕ್ತಿ ಯುಕ್ತಿಗಳನ್ನು ಸಂಚಯಿಸಿ ಧರ್ಮ ಮತ್ತು ದೇಶಗಳ ರಕ್ಷಣೆ ಮಾಡಿದುದಕ್ಕೆ ಒಂದೆರಡು ಉದಾಹರಣೆಗಳು.

ಯೋಗ್ಯ ಸಂತಾನಕ್ಕಾಗಿ ಪುತ್ರಕಾಮೇಷ್ಟಿ ಯಾಗ ಮಾಡಿದ ಕೌಸಲ್ಯ ಮಾತೆಯ ವಿಷ್ಣು ಭಕ್ತಿಯು ಅದರೊಂದಿಗೆ ಸೇರಿ ಪ್ರಪಂಚಕ್ಕೆ ಮರ್ಯಾದ ಪುರುಷೋತ್ತಮನಾದ ಶ್ರೀ ರಾಮಚಂದ್ರನು ಸಿಕ್ಕಿದನು. ಚರಿತ್ರೆಯನ್ನು ಅವಲೋಕಿಸಿದರೆ ಭವ್ಯ ಭಾರತವು ತಪಸ್ಸಿನಿಂದ ಪಡೆದ ದಿವ್ಯ ಶಕ್ತಿಯಿಂದಲೇ ರೂಪಿತವಾಗಿದೆ.

ಹೀಗೆ ಧರ್ಮ, ದೇಶ ರಕ್ಷಣೆಗೆ ನಿಸ್ವಾರ್ಥವಾಗಿ ಸೇವೆ ಸಲ್ಲಿಸಲು ಉದ್ಯುಕ್ತರಾಗುವವರು ತಮ್ಮ ತಮ್ಮ ಯೋಗ್ಯತಾನುಸಾರ ಸೂಕ್ತರೀತಿಯಲ್ಲಿ ಶಕ್ತಿ ಯುಕ್ತಿಗಳನ್ನು ಬೆಳೆಸಲು ಇರುವ ಸಾವಿರಾರು ಉಪಾಯಗಳಲ್ಲಿ ಕೆಲವು ಈ ಕೆಳಗಿನಂತಿವೆ

1) "ಅಷ್ಟ ಸಿದ್ಧಿ ನವನಿಧಿಕೆ ದಾತ" ಎಂದು ಹನುಮಾನ ಚಾಲಿಸಾದಲ್ಲಿ ನಾವು ಹನುಮಂತನನ್ನು ಹಾಡಿ ಹೊಗಳುತ್ತೇವೆ. ಹನುಮಂತನ ಆರಾಧನೆ ಮಾಡಿ ಅಷ್ಟಸಿದ್ಧಿ ನವ ನಿಧಿಗಳನ್ನು ಪಡೆದು ಅದರಿಂದ ಧರ್ಮ ರಕ್ಷಣೆ ಮಾಡಬಹುದು.

**ಅಷ್ಟ ಸಿದ್ಧಿಗಳೆಂದರೆ**

**ಅಣಿಮಾ** – ದೇಹವು ಅಣುವಿನಷ್ಟು ಸಣ್ಣದಾಗುವುದು



**ಲಘಿಮಾ** – ದೇಹವನ್ನು ಅತಿ ಹಗುರವಾಗಿಸುವುದು ಗಾಳಿಯಲ್ಲಿ ಹಾರಾಡಬಹುದು.
**ಮಹಿಮಾ** –ದೇಹವನ್ನು ಅತಿ ದೊಡ್ಡ (ಅನಂತವಾದ) ಗಾತ್ರಕ್ಕೆ ಹೆಚ್ಚಿಸುವುದು
**ಗರಿಮಾ** – ಅತಿ (ಅನಂತದಷ್ಟು) ಭಾರವಾಗುವುದು
**ವ್ಯಾಪ್ತಿ** – ಎಲ್ಲ ಸ್ಥಳಗಳಿಗೂ ಅನಿರ್ಬಂಧಿತವಾದ ಪ್ರವೇಶ ದೊರಕಿಸಿಕೊಳ್ಳುವುದು
**ಪ್ರಾಕಾಮ್ಯ** – ಇಷ್ಟ ಪಟ್ಟಿದ್ದನ್ನು ದೊರಕಿಸಿಕೊಳ್ಳುವುದು.
**ಈಶತ್ವ** – ಎಲ್ಲದರ ಮೇಲೆ ಸಂಪೂರ್ಣವಾದ ಒಡೆತನ ಹೊಂದುವುದು
**ವಶಿತ್ವ** – ಎಲ್ಲವನ್ನು ಜಯಿಸಲು ಶಕ್ತಿ ಹೊಂದುವುದು

ರಾಮಾಯಣದ ಸುಂದರಕಾಂಡವನ್ನು ದಿನಂಪ್ರತಿ ಒಂದು ಬಾರಿಯಂತೆ 48 ದಿನಗಳ ಕಾಲ ನಿರಂತರ ಶ್ರದ್ಧಾಪೂರ್ವಕ ಪಠಿಸಿದರೆ ಅವರಿಗೆ ಈ ಅಷ್ಟಸಿದ್ಧಿಯು ಸಿಗುತ್ತದೆ ಎಂದು ಪ್ರತೀತಿ ಇದೆ.

2) ಪತಂಜಲಿ ಯೋಗ ಸೂತ್ರದಲ್ಲಿ ಹೇಳಿರುವಂತೆ ಸಾಧನೆ ಮಾಡುವುದರಿಂದ ಸಿಗುವ ವಿವಿಧ ಶಕ್ತಿಗಳನ್ನು ಉಪಯೋಗಿಸಿ ಧರ್ಮರಕ್ಷಣೆ ಮಾಡಬಹುದು.

ಪ್ರಾರಂಭಿಕವಾಗಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ ಧಾರಣ, ಧ್ಯಾನ, ಸಮಾಧಿ ಇವುಗಳನ್ನು ಅಭ್ಯಾಸ ಮಾಡುತ್ತಾ ನಂತರ ಅವುಗಳನ್ನು ಉಪಯೋಗಿಸಿ ಶಕ್ತಿ ಪಡೆಯುವುದು.

### ಕೆಲವು ಆಯ್ದ ಯೋಗ ಸೂತ್ರಗಳನ್ನು ನೋಡೋಣ

ಅಹಿಂಸಾ ಸತ್ಯಾಸ್ತೇಯ ಬ್ರಹ್ಮಚರ್ಯಾಪರಿಗ್ರಹಾ ಯಮಾ:
ಏತೇ ಜಾತಿ ದೇಶ ಕಾಲ ಸಮಾಯಾನವಚ್ಛಿನ್ನಾ: ಸಾರ್ವಭೌಮಾ ಮಹಾವೃತಮ್.

ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ – ಇವು ಯಮಗಳು, ಇವು ದೇಶ, ಕಾಲ, ಸಮಯ, ಜಾತಿ, ನಿಯಮಗಳಿಂದ ದೂರವಾದ ಮಹಾವೃತಗಳು.

**ಶೌಚ–ಸಂತೋಷ–ತಪ:** ಸೌಧ್ಯಾಯೇಶ್ವರ ಪ್ರಣಿಧಾನಾನಿ ನಿಯಮಾ: ಬಾಹ್ಯ ಮತ್ತು ಅಂತರಂಗ ನೈರ್ಮಲ್ಯ, ತೃಪ್ತಿ, ತಪಸ್ಸು, ಸ್ವಾಧ್ಯಾಯ, ಈಶ್ವರೋಪಾಸನೆ ಇವು ನಿಯಮಗಳು.

**ಅಹಿಂಸಾ ಪ್ರತಿಷ್ಠಾಯಾಂ ತತ್ಸನ್ನಿಧೌ ವೈರತ್ಯಾಗ:** ಅಹಿಂಸೆಯಲ್ಲಿ ಪ್ರತಿಷ್ಠಿತವಾದ ಮೇಲೆ ಅವನೆದುರಿಗೆ ಇತರರ ದ್ವೇಷವೆಲ್ಲ ಶಾಂತವಾಗುವುದು. ಅರ್ಥಾತ್ ಅವರ ಮೇಲೆ ಯಾರಿಗೂ ದ್ವೇಷವು ಉದ್ಭವವಾಗುವುದಿಲ್ಲ.

**ಸತ್ಯ ಪ್ರತಿಷ್ಟಾಯಾಂ ಕ್ರಿಯಾಫಲಾಶ್ರಯತ್ವಮ್:** ಸತ್ಯದಲ್ಲಿ ಪ್ರತಿಷ್ಠನಾದ ಮೇಲೆ, ತನಗೆ ಮತ್ತು ಇತರರಿಗೆ ಕರ್ಮವಿಲ್ಲದೆ ಕರ್ಮಫಲವನ್ನು ಯೋಗಿಯು ಪಡೆಯಬಲ್ಲ.

ಅಂತಹವರು ಹೇಳುವುದೆಲ್ಲ ಸತ್ಯವಾಗುವುದು. ಪುಣ್ಯಶಾಲಿಯಾಗೆಂದು ಇನ್ನೊಬ್ಬನನ್ನು ಹರಸಿದರೆ ಅವನು ಪುಣ್ಯಶಾಲಿಯಾಗುವನು. ರೋಗಿಗೆ ಗುಣವಾಗು ಎಂದರೆ ಅವನು ತತ್‌ಕ್ಷಣವೇ ಗುಣವಾಗುವನು.

ಹಾಗೆಯೇ ಅಸ್ತೇಯದಲ್ಲಿ (ಕಳ್ಳತನ ಮಾಡದೇ ಇರುವುದರಲ್ಲಿ) ಪ್ರತಿಷ್ಠಿತನಾದ ಮೇಲೆ ಯೋಗಿಗೆ ಎಲ್ಲಾ ಐಶ್ವರ್ಯಗಳೂ ಪ್ರಾಪ್ತವಾಗುವವು. ಹೀಗೆ ಅಷ್ಟಾಂಗ ಯೋಗದಲ್ಲಿರುವುದೆಲ್ಲವನ್ನು ಅಭ್ಯಾಸಿಸಿದ ಮೇಲೆ ಶಕ್ತಿ ಸಂಚಯನಕ್ಕೆ ಈ ಕೆಳಗಿನಂತೆ ಸಾಧನೆ ಮಾಡಬೇಕು. ಧಾರಣ, ಧ್ಯಾನ, ಸಮಾಧಿಯನ್ನು ಕರಗತಗೊಳಿಸಬೇಕು. ಧಾರಣವೆಂದರೆ ಚಿತ್ತವನ್ನು ಯಾವುದಾದರೂ ಒಂದು ವಸ್ತುವಿನ ಮೇಲೆ ನಿಲ್ಲಿಸುವುದು. ಹಾಗೆ ನಿರಂತರವಾಗಿ ಹೆಚ್ಚು ಸಮಯ ನಿಲ್ಲಿಸಲು ಸಾಧ್ಯವಾದರೆ ಅದು ಧ್ಯಾನ. ಎಲ್ಲಾ ಆಕಾರಗಳನ್ನು ತೊರೆದು ಅರ್ಥದ ಮೇಲೆ ಮಾತ್ರ ಧ್ಯಾನ ಮಾಡಿದರೆ ಅದು ಸಮಾಧಿ.

ಧಾರಣ, ಧ್ಯಾನ, ಸಮಾಧಿ ಇವುಗಳನ್ನು ಒಂದೇ ವಸ್ತುವಿನ ಮೇಲೆ ಮಾಡಿದಾಗ ವಸ್ತುವಿನ ಆಕಾರವು ಮಾಯವಾಗಿ ಅದರ ಅರ್ಥ ಮಾತ್ರ ಉಳಿಯುತ್ತದೆ. ಇದನ್ನು ಸಂಯಮ ಎನ್ನುತ್ತಾರೆ. ಈ ಎಲ್ಲವುಗಳನ್ನು ಯೋಗ್ಯ ಗುರುವಿನ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುವುದು ಕಡ್ಡಾಯ.



ಸಂಯಮವು ಸಿದ್ಧಿಸಿದ ಮೇಲೆ ಎಲ್ಲಾ ಶಕ್ತಿಗಳೂ ಅವನ ವಶವಾಗುವುವು. ನಮಗೆ ಬೇಕು ಬೇಕಾದಾಗ ಬೇಕುಬೇಕಾಗುವಂತೆ ಸೈಕಲ್ ಬಿಡಲು ಸಾಧ್ಯವಾದರೆ ಸೈಕಲ್ ಬಿಡುವುದು ಸಿದ್ಧಿಸಿದೆ ಎಂದರ್ಥ. ಹಾಗೆಯೇ ನಮಗೆ ಬೇಕಾದಾಗಲೆಲ್ಲ, ಬೇಕಾದ ವಸ್ತುಗಳ ಮೇಲೆ ಸಂಯಮ ಮಾಡಲು ಸಾಧ್ಯವಾಗುವುದನ್ನು ಸಂಯಮ ಸಿದ್ಧಿ ಎಂದು ಹೇಳಲಾಗುತ್ತದೆ.

ಏಕಪ್ರಕಾರವಾಗಿ ಹರಿಯುವ ಮನಸ್ಸಿನ ನಿಗ್ರಹವು ಸಾಧ್ಯ. ದಿನವೂ ಅಭ್ಯಾಸ ಮಾಡಿದಂತೆ ಅದು ಸ್ಥಿರವಾಗುವುದು. ಮನಸ್ಸಿಗೆ ಚಿರ ಏಕಾಗ್ರತೆಯ ಸ್ವಭಾವವು ಬರುವುದು.

ಸಂಯಮದಿಂದ ಪಡೆಯಬಹುದಾದ ಸಿದ್ಧಿಯೆಂದರೆ ಮತ್ತೊಬ್ಬರ ದೇಹದ ಸಂಜ್ಞೆಗಳ ಮೇಲೆ ಸಂಯಮ ಮಾಡುವುದ–ರಿಂದ ಅವರ ಮನಸ್ಸಿನ ಜ್ಞಾನವು ಬರುವುದು.

ದೇಹದ ರೂಪದ ಮೇಲೆ ಸಂಯಮ ಮಾಡುವುದರಿಂದ ಯೋಗಿಯ ದೇಹವು ಕಣ್ಣಿಗೆ ಕಾಣದಂತೆ ಆಗುವುದು. ಆನೆ ಮತ್ತು ಇತರ ವಸ್ತುಗಳ ಮೇಲೆ ಸಂಯಮ ಮಾಡುವುದರಿಂದ ಅವುಗಳ ಶಕ್ತಿ ಯೋಗಿಗೆ ಬರುವುದು. ಸೂರ್ಯನ ಮೇಲೆ ಸಂಯಮ ಮಾಡುವುದರಿಂದ ಪ್ರಪಂಚದ ಜ್ಞಾನವೂ, ಚಂದ್ರನ ಮೇಲೆ ಸಂಯಮ ಮಾಡುವುದರಿಂದ ತಾರಾ ವ್ಯೂಹಗಳ ಜ್ಞಾನವೂ ಬರುವುದು.

ನಾಭಿಯ ಮೇಲೆ ಸಂಯಮ ಮಾಡುವುದರಿಂದ ದೇಹರಚನೆಯ ಜ್ಞಾನ ಬರುವುದು. ಗಂಟಲಿನ ಕೆಳಭಾಗದ ಮೇಲೆ ಸಂಯಮ ಮಾಡುವುದರಿಂದ ಹಸಿವು ತೀರುವುದು.

ಹೀಗೆ ವಿವಿಧ ರೀತಿಯ ಸಂಯಮಗಳಿಂದ ಅಷ್ಟ ಸಿದ್ಧಿಗಳು, ಸರ್ವ ಶಕ್ತಿತ್ವ, ಸರ್ವಜ್ಞತ್ವಗಳು ಲಭಿಸುವುವು. ಮನೋವೇಗದಿಂದ ದೇಹದ ಚಲನೆ ಸಾಧ್ಯ. ತ್ರಿಕಾಲ ಜ್ಞಾನ, ಕೈವಲ್ಯ ಪದವೂ ಸಿಗುವುದು.

ಯೋಗ್ಯ ಗುರುಗಳ ಮಾರ್ಗದರ್ಶನದಲ್ಲಿ ಹತ್ತಾರು ವರ್ಷ ಸಾಧನೆ ಮಾಡಿದರೆ ಆಗ ಸಿಗುವ ಶಕ್ತಿಯನ್ನು ಧರ್ಮದ ರಕ್ಷಣೆಗೆ, ಸಮಾಜದ ಒಳಿತಿಗೆ ಉಪಯೋಗಿಸುತ್ತಾ ತನ್ನ ಉದಾತ್ತ ಗುರಿಯಾಗಿರುವ ಕೈವಲ್ಯ ಪದ ಮೋಕ್ಷವನ್ನೂ ಸಹ ಪಡೆಯಬಹುದು.

3) ಹಿಂದೆ ರಾಜರು ಶತ್ರು ಸಂಹಾರಕ್ಕೆ ಅಸ್ತ್ರಗಳನ್ನು ಉಪಯೋಗಿಸುತ್ತಿದ್ದರು. ಮಂತ್ರ ಸಹಿತ ಶಸ್ತ್ರ ಪ್ರಯೋಗವನ್ನು ಅಸ್ತ್ರ ಎನ್ನುತ್ತಾರೆ. ಇಂತಹ ಮಂತ್ರವನ್ನು ದೀಕ್ಷೆಯ ನಂತರ ವರ್ಷಾನುಗಟ್ಟಲೆ ತಪಸ್ಸು ಮಾಡಿಯೂ ಮಂತ್ರ ದೇವತೆಗಳ ಸಾಕ್ಷಾತ್ಕಾರ ಮಾಡಿ ಮಂತ್ರಸಿದ್ಧಿ ಪಡೆದು ಅದರಿಂದ ಶತ್ರು ಸಂಹಾರ ಮಾಡುತ್ತಿದ್ದರು.




ಇಂದು ಕೂಡಾ ಮನ್ಯುಸೂಕ್ತಾದಿ, ಜಾತವೇತಸೇ ಇತ್ಯಾದಿ ಮಂತ್ರಗಳ ದೀಕ್ಷೆ ಪಡೆದು ಸಿದ್ಧಿ ಮಾಡಿ ಜಪ ಮಾಡಿದರೆ ಶತ್ರು ಅಥವಾ ಶತ್ರುತ್ವ ನಾಶವಾಗಲು ಸಾಧ್ಯವಿದೆ. ಅದಕ್ಕೆ ಯಥಾ ವಿಧಿ ದಶಾಂಶ ಹೋಮ ಮಾಡಬೇಕಾಗುತ್ತದೆ. ನಿಸ್ವಾರ್ಥವಾಗಿ ಮಾಡಿದರೆ ಉತ್ತಮ ಫಲ (ದ್ವೇಷದಿಂದ ಹುಟ್ಟಿದ ಶತ್ರುಗಳ ವಿರುದ್ಧ ಪ್ರಯೋಗಕ್ಕಲ್ಲ ಇದು ಇರುವುದು) ಧರ್ಮ ವಿರೋಧಿ ಶತ್ರುಗಳನ್ನು ಮಟ್ಟ ಹಾಕಲು ಸಾಧ್ಯ. ಹೀಗೆ ಪರಿಶುದ್ಧ ಮನಸ್ಸಿನಿಂದ ನಿಸ್ವಾರ್ಥವಾಗಿ ಉಪಯೋಗಿಸಿದರೆ ಲೋಕ ಕಲ್ಯಾಣವಾಗುವಂತಹ ಹಲವಾರು ಮಂತ್ರ, ತಂತ್ರ ವಿದ್ಯೆಗಳನ್ನು ಸನಾತನ ಧರ್ಮದಲ್ಲಿ ಹೇಳಿದೆ.

ಇಂದು ಭಾರವಾದ ವಸ್ತುಗಳನ್ನು ಎತ್ತಲು ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಲಾಗುತ್ತದೆ. ಎಲ್ಲದಕ್ಕೂ ವೈಜ್ಞಾನಿಕ ತಂತ್ರಜ್ಞಾನಗಳನ್ನು ಉಪಯೋಗಿಸಲಾಗುತ್ತಿದೆ. ಆದರೆ ಆಂತರಿಕ ಸಾಧನೆಯಿಂದಾಗುವ ತಂತ್ರಜ್ಞಾನದ ಉಪಯೋಗ ಕ್ಷೀಣಿಸುತ್ತಿದೆ. ಆದರೆ ಯೋಗ್ಯ ನಿಸ್ವಾರ್ಥ ಸಾಧಕನಿಗಾಗಲೀ ಲೋಕಕಲ್ಯಾಣಕ್ಕಾಗಿ ತನ್ನನ್ನು ತಾನು ಅರ್ಪಿಸುವ ಬಹಳ ಮಂದಿಗೆ ಈ ಅಷ್ಟಸಿದ್ಧಿಯಾದಿ ತಂತ್ರಜ್ಞಾನಗಳನ್ನು ಉಪಯೋಗಿಸಲು ಇಂದಿಗೂ ಅವಕಾಶವಿದೆ.

ಯಾರಿಗೆ ಸ್ವತಃ ಸಾಧನೆ ಸಾಧ್ಯವಿಲ್ಲವೋ ಅಂತಹವರು ಸಾಧಕರಿಗೆ ಆಶ್ರಯದಾತರಾಗಿ ಸೇವೆ ಸಲ್ಲಿಸಬಹುದು. ಮುಳುಗಿದವನನ್ನು ನೋಡಿ ಅಯ್ಯೋ ಪಾಪ ಎಂಬ ಭಾವನಾತ್ಮಕ ಚಡಪಡಿಕೆಯಿಂದ ಏನೂ ಪ್ರಯೋಜನವಿಲ್ಲ. ಈಜುವ ಶಕ್ತಿ ಇದ್ದವನಿಂದ ಮಾತ್ರ ಮುಳುಗಿದವನನ್ನು ರಕ್ಷಿಸಲು ಸಾಧ್ಯ.

ಭಾವನೆಯಿಂದ ಹೋರಾಟ ಸಾಧ್ಯವಿಲ್ಲ. ಶಕ್ತಿಯಿಂದ ಮಾತ್ರ ಸಾಧ್ಯ.



# ನಾವು ಭಾರತೀಯರು

ಹುಟ್ಟಿ ಬೆಳೆದು, ಮೆಟ್ಟಿ ನಡೆದು,
ತುಷ್ಟಿ, ಪುಷ್ಟಿಯಲ್ಲಿ ಮೆರೆದು
ಸೃಷ್ಟಿಯಲ್ಲಿ ನಾವು ಸೇರಿ
ತೃಪ್ತಿಪಟ್ಟ ನೆಲವಿದು
ಇದುವೆ ನಮ್ಮ ಭಾರತ...
ನಾವೇ ಭಾರತೀಯರು॥ 1 ॥

ಹಲವು ಶತಸಹಸ್ರ ವರುಷ
ಮೊದಲಿನಿಂದ ಮೆರೆದ ದೇಶ
ಒಳಿತು ಕೆಡುಕುಗಳನ್ನು ಕಂಡು
ಸಹಿಸಿ ಗೆಲುವು ಪಡೆದ ದೇಶ
ಇದುವೆ ನಮ್ಮ ಭಾರತ....
ನಾವೇ ಭಾರತೀಯರು....॥ 2 ॥

ಗಂಗೆ, ತುಂಗೆ ಹರಿವ ನಾಡು
ಶೃಂಗ ಹಿಮದ ಧವಳ ಬೀಡು
ರಂಗಿನಾಟ ಎಸೆವ ಕಡಲು
ಮೂಡು, ಪಡು, ತೆಂಕು ಒಡಲು
ಇದುವೆ ನಮ್ಮ ಭಾರತ...
ನಾವೇ ಭಾರತೀಯರು....॥ 3 ॥

ಹಸಿರ ಉಸಿರು ಸುತ್ತ ಮುತ್ತ
ಒಸೆವ ಸಸ್ಯ ಇಲ್ಲಿ ನಿತ್ಯ
ಖಗ ಮೃಗಗಳ ಚೆಲುವ ತಾಣ
ಜಗದ ರಮ್ಯ ಪ್ರಕೃತಿ ಗಾನ
ಇದುವೆ ನಮ್ಮ ಭಾರತ...
ನಾವೇ ಭಾರತೀಯರು... ॥ 4 ॥

ಭಾಷೆ, ವೇಷ, ಜಾತಿ, ನಿಯಮ
ಧರ್ಮ, ಕರ್ಮ, ಅಶನ, ವಸನ
ವಿವಿಧವಾಗಿ ಇದ್ದರೇನು?
ಭಿನ್ನತೆಯಲ್ಲಿ ಐಕ್ಯವೆಲ್ಲ
ಇದುವೆ ನಮ್ಮ ಭಾರತ...
ನಾವೇ ಭಾರತೀಯರು....॥ 5 ॥

ನೂರು ಬಾರಿ ಜನ್ಮವೆತ್ತಿ
ಭಾರತೀಯರಾಗಿ ಬರುವ
ನೇರ ನಡೆಯ ಸಾರಿ ಮೆರೆವ
ಧೀರತನವು ತರಲಿ ಜಯವ
ಇದುವೆ ನಮ್ಮ ಭಾರತ....
ನಾವೇ ಭಾರತೀಯರು... ॥ 6 ॥

**ಇಂದಿರಾ ಹಾಲಂಬಿ**
ಕನ್ನಡ ಮಕ್ಕಳ ಕಂಠಾಭರಣ ಸಂಕಲನದಿಂದ
ಸಂದೀಪ ಸಾಹಿತ್ಯ, ಅತ್ರಾಡಿ (ಉಡುಪಿ ಜಿಲ್ಲೆ)

# ನಿಮಗೆಷ್ಟು ಗೊತ್ತು



– ಬಿ.ಈ. ಸೀತಾಲಕ್ಷ್ಮೀ, ಯು.ಎಸ್.ಎ.

1) ಯಶಸ್ವಿಯಾಗಿ ಚಂದ್ರನ ದಕ್ಷಿಣ ಧ್ರುವ ತಲುಪಿದ ಮೊಟ್ಟಮೊದಲ ರಾಷ್ಟ್ರ ?
2) 'ಮಾಸ್ಟರ್ ಗ್ಲಾಂಡ್' ಎಂದು ಯಾವ ಗ್ರಂಥಿಯನ್ನು ಕರೆಯುತ್ತಾರೆ ?
3) 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಯಾರ ಆತ್ಮಕಥೆ ?
4) ಶ್ರೀ ಕೃಷ್ಣನಿಗೆ ಚಕ್ರಾಯುಧವನ್ನು ಕೊಟ್ಟವರು ಯಾರು ?
5) ಶರಾವತಿ ನದಿಯ ಉಗಮಸ್ಥಾನ ಯಾವುದು ?
6) ಚೈತಭೂಮಿ ಯಾವ ನಾಯಕನ ಸಮಾಧಿಸ್ಥಳ ?
7) ರಸ್ತೆ ಅಪಘಾತ ಸಮಯದಲ್ಲಿ ಕರೆಮಾಡಬೇಕಾದ ಸಹಾಯವಾಣಿ ಸಂಖ್ಯೆ ಯಾವುದು?
8) ಕಥಕ್ಕಳಿ ನೃತ್ಯವು ಯಾವ ರಾಜ್ಯಕ್ಕೆ ಸಂಬಂಧಿಸಿದೆ ?
9) ಅಂತಾರಾಷ್ಟ್ರೀಯ ಮಾತೃಭಾಷಾ ದಿನವನ್ನು ಎಂದು ಆಚರಿಸಲಾಗುತ್ತದೆ ?
10) 'ಹಾರುವ ಸಿಖ್' ಎಂಬ ಬಿರುದು ಪಡೆದಿದ್ದ ಭಾರತೀಯ ಓಟಗಾರ ಯಾರು ?



**ಉತ್ತರಗಳು**

1) ಭಾರತ
2) ಪಿಟ್ಯುಟರಿ ಗ್ರಂಥಿ
3) ಶಿವರಾಮ ಕಾರಂತ
4) ಅಗ್ನಿ
5) ಅಂಬುತೀರ್ಥ (ಶಿವಮೊಗ್ಗ)
6) ಡಾ. ಬಿ.ಆರ್. ಅಂಬೇಡ್ಕರ್
7) 1073
8) ಕೇರಳ
9) ಫೆಬ್ರವರಿ 21 ರಂದು
10) ಮಿಲ್ಖಾ ಸಿಂಗ್

(9–10 ಉತ್ತರಗಳು ಸರಿಯಾದರೆ ಅತ್ಯುತ್ತಮ, 7–8 ಉತ್ತಮ)

# ಶಬ್ದಶೋಧ–193ರ ಉತ್ತರ

**ರಚನೆ:** *ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು*


| | | | | | | | | | | | | | |
|---|---|---|---|---|---|---|---|---|---|---|---|---|---|
| 1 ರಾ | ಮಾ | 2 ವ | ತಾ | 3 ರ | 4 ತ್ರೇ | 5 ತಾ | ಯು | ಗ | 6 ಪು | 7 ತ್ರ | ಕಾ | ಮೇ | ಷ್ಠಿ |
| ಮ | | ಸಿ | | ಘು | | ಟ | | | | ಮಿ | | | |
| ಚಂ | | ಷ್ಠ | | ವಂ | | 8 ಕಿ | ಷ್ಕಿಂ | 9 ಧ | | ಶ್ವಾ | | | |
| ದ್ರ | | | 10 ತ್ರು | ಶ | ಘ್ನ | | | ರ | | 11 ವಿ | ಭೀ | ಷ | 12 ಣ |
| | 13 ನಂ | 14 ದಿ | | | | 15 ವ | ನ | ವಾ | ಸ | | | | ಕ್ಷ್ಮ |
| 16 ಪು | | 17 ಲೀ | ಬಾ | ಜಾ | | ಮಿ | | ಋ | | 18 ಚೈ | ತ್ರ | | ಲ |
| ನ | | ಪ | | | 19 ಜ | ನ | 20 ಕ | | | | | 21 ಮಿ | |
| ರ್ವ | | | 22 ತ್ರಿ | ಜ | ಟಾ | | ಬಂ | | 23 ದಾ | 24 ಶ | ರ | ಥಿ | |
| 25 ಸು | 26 ಮಂ | ತ್ರ | | | 27 ಯು | ಜಿ | ಧಾ | ತು | | ಬ | | 28 ಲ | 29 ವ |
| | ಡೋ | | 30 ಕು | 31 ಶ | | | | | 32 ಮಾ | ರೀ | ಚ | | ಜ್ರಾ |
| 33 ಅಂ | ದ | ಗ | | 34 ಕುಂ | ಭ | 35 ಕ | ರ್ಣ | | ತ | | 36 ಜ | ಟಾ | ಯು |
| | ರಿ | | 37 ಶಾಂ | ತ | | ಮೂ | | 38 ವೇ | ಲಿ | | | | ಧ |
| 39 ಭ | | 40 ಕೋ | ಸ | ಲಾ | | ಷ್ಯ | | ದ | | 41 ಅ | 42 ಹ | ಲ್ಯಾ | |
| ರ | | | | | | ಋ | | ವ | | | ಗು | | 43 ವಾ |
| 44 ತ | ಮ | ಸಾ | ನ | ದಿ | | | 45 ಅ | ತಿ | ಕಾ | ಯ | | 46 ಬ | ಲಿ |





# ಶಬ್ದಶೋಧ–194

**ರಚನೆ:** ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು






## ಎಡದಿಂದ ಬಲಕ್ಕೆ

1. ಲೇಪಾಕ್ಷಿ ದೇವಾಲಯದಲ್ಲಿರುವ ಮೂಲ ದೇವರು (4)
3. ನೊಸಲಿನಲ್ಲಿ ಕಣ್ಣಿರುವ ಶಿವ (3)
4. ಹಿಂದು ಮುಂದಾದ ಇವ ಬಹಳ ಹತ್ತಿರದವನು/ಕೊನೆಯಲ್ಲಿ ದೀರ್ಘವಾಗಿದ್ದಾನೆ (3)
6. ಕಟ್ಟಿಕೊಟ್ಟ ಬುತ್ತಿ / ಅನ್ನ (4)
9. ಮಂಗ, ಮರ್ಕಟಕ್ಕೊಂದು ಪರ್ಯಾಯಪದ (3)
10. ರೀತಿಯ ಜೋಡಿ ಪದ / ಪದ್ಧತಿ (3)
12. ಅಜ್ಞಾತವಾಸದಲ್ಲಿ ಭೀಮನ ಹೆಸರು (3)
14. ಅತಿಯಾಗಿ ಆಸೆ ಪಡುವವನು (3)
16. ಆರತಿ ಎತ್ತುವುದು (4)
18. ಪೆದ್ದ, ದಡ್ಡ (3)
19. ಹುತ್ತ (3)
20. ವಿಷ್ಣುವಿನ ಅಂಶದಿಂದ ಹುಟ್ಟಿದ ಅನಸೂಯತನಯ (4)



## ಮೇಲಿನಿಂದ ಕೆಳಗೆ

1. ಪ್ರೇಕ್ಷಕ (3)
2. ದೈವಿಕವಾದ ತಿಳುವಳಿಕೆಯನ್ನು ಹೊಂದಿದವನು/ದಾರ್ಶನಿಕ (3)
3. ಹಣೆ/ನೊಸಲು (2)
5. ನೀರು (2) ಆಪ
7. ಬಿಸಿಲುಗುದುರೆ/ಮರೀಚಿಕೆ (4)
8. ಸಮುದ್ರ ಮಥನ ಸಮಯದಲ್ಲಿ ಹುಟ್ಟಿದ ಮಂದಾರ ಪುಷ್ಪ (4)
9. ಕೋಮಲತೆ, ಮೃದುವಾಗಿರುವುದನ್ನು ಇಲ್ಲಿ ಹುಡುಕಿ (3)
11. ಕಿವಿಯ ಒಂದು ಸುಂದರ ಆಭರಣ (3)
13. ಭಂಡಾಸುರನನ್ನು ಸಂಹಾರ ಮಾಡಿದ ದೇವಿ (3)
15. ತರ್ಕ ಮಾಡುವವನಲ್ಲಾ ವ್ಯಾಪಾರಿ (3)
16. ಮೋಡ/ಮುಗಿಲು (3)
17. ಹಿಂದು ಮುಂದಾದ ಪರದೇಶದವ (3)

*(ಕಳೆದ ಸಂಚಿಕೆಯಿಂದ ಮುಂದುವರೆದ ಭಾಗ...)*

# ರಾಮ ಕಾರ್ಯಕ್ಕೆ ತಡೆಯೇ ಇಲ್ಲ

## ಆಪತ್ತಿನಲ್ಲಿ ಕಾಯುವ ಆಂಜನೇಯ

ಜಾಂಬವಂತನು ಹನುಮಂತನನ್ನು ಕರೆದು, "ಹನುಮಂತಾ ಈಗ ಯೋಚಿಸಲು ಸಮಯವಿಲ್ಲ. ಹಿಮಾಲಯ ಪರ್ವತದಲ್ಲಿ ಋಷಭ, ಕೈಲಾಸಗಳೆಂಬ ಎರಡು ಎತ್ತರದ ಶಿಖರಗಳಿವೆ. ಅವುಗಳ ನಡುವೆ ಔಷಧ ಎನ್ನುವ ಪರ್ವತವೂ ಇದೆ. ಅಲ್ಲಿ ಸಾವಿರಾರು ಮೂಲಿಕೆಗಳಿವೆ. ಅವುಗಳಲ್ಲಿ ಮೃತಸಂಜೀವಿನಿ ಮೂಲಿಕೆಯಿಂದ ಸತ್ತವರನ್ನು ಬದುಕಿಸಬಹುದು. ವಿಶಲ್ಯ ಕರಣಿಯು ಗಾಯವನ್ನು ಗುಣಪಡಿಸುತ್ತದೆ. ಸಾವರ್ಣ್ಯ ಕರಣಿಯು ಗಾಯದ ಕಲೆಯನ್ನು ಕಾಣಿಸಬಿಡದು. ಸಂಧಾನ ಕರಣಿಯಿಂದ ಕತ್ತರಿಸಿಹೋದ ಅಂಗಗಳನ್ನು ಮತ್ತೆ ದೇಹಕ್ಕೆ ಜೋಡಿಸಬಹುದು" ಎಂದು ಹೇಳಿ ಅವುಗಳನ್ನು ಗುರುತಿಸುವ ಬಗೆಯನ್ನು ತಿಳಿಸಿದನು.

ಹನುಮಂತನು ಕೂಡಲೇ ಸಮುದ್ರವನ್ನು ವಾಯುಮಾರ್ಗದಿಂದ ದಾಟಿ ಹಿಮಾಲಯವನ್ನು ತಲುಪಿದನು. ಜಾಂಬವಂತನು ಹೇಳಿದ ಶಿಖರದ ಬಳಿಯೂ ಬಂದನು. ಆದರೆ ಅಲ್ಲಿ ಎಲ್ಲಿ ನೋಡಿದರೂ ಹಲವು ಸಾವಿರ ವಿಧದ ಗಿಡಗಳು, ಮೂಲಿಕೆಗಳೂ ಮತ್ತು ಅವುಗಳ ವಿವಿಧ ಸುವಾಸನೆಗಳು. ಹನುಮಂತನಿಗೆ ದಿಕ್ಕು ತೋಚದಂತಾಯಿತು. ಏನನ್ನು ಹುಡುಕಲಿ! ಏನನ್ನು ತೆಗೆದುಕೊಳ್ಳಲಿ! ಕೊನೆಗೆ ಅವನ ಬುದ್ಧಿವಂತಿಕೆಗೆ ಒಂದು ದಾರಿ ತೋರಿತು. ಆ ಔಷಧ ಪರ್ವತವನ್ನೇ ಅಲುಗಾಡಿಸಿ ಆ ಇಡಿ ಪರ್ವತವನ್ನೇ ಕೈಗೆ ತೆಗೆದುಕೊಂಡನು. ಅದನ್ನೇ ಲಂಕೆಗೆ ತಂದುಬಿಟ್ಟನು. ಜಾಂಬವಂತನು ಅವುಗಳಲ್ಲಿ ಬೇಕಾದ ಮೂಲಿಕೆಯನ್ನು ತೆಗೆದುಕೊಂಡು ಅದರ ಪರಿಮಳವನ್ನು ರಾಮಲಕ್ಷ್ಮಣರಿಗೂ ಉಳಿದ ಸೈನಿಕರಿಗೂ ಬರುವಂತೆ ಮಾಡಿದನು. ಎಲ್ಲ ಸೈನಿಕರು ಎದ್ದು ಕುಳಿತರು. ರಾಕ್ಷಸರು ಪ್ರತಿದಿನವೂ ಸತ್ತ ತಮ್ಮ ಸೈನಿಕರ ಲೆಕ್ಕ ಸಿಗಬಾರದೆಂದು ಅವರ ಶವಗಳನ್ನು ಸಮುದ್ರಕ್ಕೆ ಬಿಸಾಕಿಬಿಡುತ್ತಿದ್ದರು. ಹಾಗಾಗಿ ರಾಕ್ಷಸರು ಯಾರೂ ಕೂಡಾ ಸಂಜೀವಿನಿಯ ಗಾಳಿಯಿಂದ ಎದ್ದು ಬದುಕಲಾಗಲಿಲ್ಲ. ಕೆಲಸವಾದ ಮೇಲೆ ಮರೆಯಲಿಲ್ಲ ನೋಡಿ! ಆ ಮೂಲಿಕೆಯ ಲಾಭವು ಮುಂದೆಯೂ ಎಲ್ಲರಿಗೂ ಸಿಗಬೇಕಲ್ಲವೇ? ಅದಕ್ಕಾಗಿ ಹನುಮಂತನು ಆ ಪರ್ವತವನ್ನು ಮತ್ತೆ ಹಿಮಾಲಯದಲ್ಲಿ ಅದು ಇದ್ದ ಮೊದಲ ಸ್ಥಾನದಲ್ಲಿಟ್ಟು ಬಂದನು.

ಯುದ್ಧ ಮುಗಿಯಿತು. ಈಗಿನ್ನು ಎಲ್ಲರೂ ಅಯೋಧ್ಯೆಗೆ ಹೊರಟರು. ಶ್ರೀರಾಮನಿಗೆ ಎಲ್ಲಾ ವಿಧದಲ್ಲೂ ಸರಿಯಾಗಿ ವ್ಯವಸ್ಥೆಯಾಗಬೇಕು. ಅವನಿಗೊಂದು ಯೋಚನೆಯಾಯಿತು. ಭರತನು ಹದಿನಾಲ್ಕು ವರ್ಷ ಅಯೋಧ್ಯೆಯನ್ನು ಆಳುತ್ತ ಇದ್ದಾನೆ. ಅವನಿಗೆ ರಾಜ್ಯಭಾರದ ಜೀವನವೇ ಚೆನ್ನಾಗಿರುತ್ತದೆ! ಅಣ್ಣನು ಯಾಕೆ ಬರಬೇಕು? ಎಂದು ಅನಿಸಲೂಬಹುದು. ಹಾಗೇನಾದರೂ ಇದ್ದರೆ ನಾನಂತೂ ಅಯೋಧ್ಯೆಗೆ ಹೋಗುವುದಿಲ್ಲ. ಭರತನೇ ರಾಜ್ಯವಾಳಲಿ. ಆದರೆ ಇದನ್ನು ತಿಳಿಯುವುದು ಹೇಗೆ? ಅದಕ್ಕೆ ರಾಮನು ಹನುಮಂತನನ್ನು ಆರಿಸಿದನು. ಅವನನ್ನು ಕರೆದು 'ಭರತನೇನಾದರೂ ರಾಜ್ಯದ ಆಸೆಯಿಂದ ನಾನು ಅಯೋಧ್ಯೆಗೆ ಮರಳುವುದನ್ನು ಇಷ್ಟಪಡದಿರಬಹುದು. ಆದುದರಿಂದ ನೀನು ಮೊದಲು ಅಯೋಧ್ಯೆಗೆ ಹೋಗಿ ನಾನು ಮರಳಿ ಬರುತ್ತಿರುವ ಬಗ್ಗೆ ಭರತನಿಗೆ ಹೇಳಿರು. ಆಗ ನೀನು ಅವನ

ಮಾತಿನಿಂದ, ಅವನ ಮುಖದ ಚರ್ಯೆಯಿಂದ ಅವನ ಮನಸ್ಸನ್ನು ತಿಳಿಯಬಲ್ಲೆ. ಅವನಿಗೆ ರಾಜ್ಯವನ್ನು ಆಳಿಕೊಂಡು ಇರಬೇಕು. ನಾನು ಬರಬಾರದು ಎಂದು ಅನಿಸುವುದಾದರೆ ನನಗೆ ಮೊದಲು ಬಂದು ತಿಳಿಸು' ಎಂದು ಹೇಳಿದನು. ಆದರೆ ಭರತನು ರಾಮನಂತಹ ಅಣ್ಣನಿಗೆ ತಮ್ಮನಾದವನು. ಹನುಮಂತನು ಭರತನಿಗೆ ರಾಮನ ಆಗಮನವನ್ನು ತಿಳಿಸುತ್ತಿದ್ದಂತೆ ಅವನು ಸಂತೋಷದಿಂದ ಮೈಮರೆತನು. ಹನುಮಂತನಿಗೆ ಹಲವು ರೀತಿಯ ಸನ್ಮಾನಗಳನ್ನು ಮಾಡಿದನು. ಆಗ ಭರತನಿಗೆ ಅಣ್ಣನ ಮೇಲಿರುವ ಪ್ರೀತಿ ಎಷ್ಟು ಎನ್ನುವುದು ಹನುಮಂತನಿಗೆ ತಿಳಿಯಿತು. ಮುಂದೆ ಶ್ರೀರಾಮನಿಗೆ ಪಟ್ಟಾಭಿಷೇಕವು ನಡೆಯಿತು. ಆ ಉತ್ಸವದಲ್ಲಿ ಶ್ರೀರಾಮನು ಸೀತಾದೇವಿಗೆ ಅಮೂಲ್ಯವಾದ ಮುತ್ತಿನ ಹಾರವೊಂದನ್ನು ಉಡುಗೊರೆಯಾಗಿ ಕೊಟ್ಟನು. ಆಕೆಯು ಒಂದು ಕ್ಷಣ ಅದನ್ನು ಧರಿಸದೆ ಕೈಯಲ್ಲಿ ಹಿಡಿದಿಟ್ಟುಕೊಂಡಳು. ಆಗ ಶ್ರೀರಾಮನು 'ದೇವಿ, ಇದನ್ನು ಯಾರಿಗಾದರೂ ಉಡುಗೊರೆಯಾಗಿ ಕೊಡಬೇಕೆನಿಸಿದರೆ ಕೊಟ್ಟು ಬಿಡು'. ಎಂದನು. ಸೀತಾದೇವಿಯು ಅದನ್ನು ಹನುಮಂತನಿಗೆ ಕೊಟ್ಟಳು. ಶ್ರೀರಾಮನಿಗೂ ಸೀತೆಗೂ ಹನುಮಂತನೆಂದರೆ ಅಷ್ಟೊಂದು ಪ್ರೀತಿ.


ಹನುಮಂತನು ಚಿರಂಜೀವಿ. ಎಲ್ಲೆಲ್ಲಿ ಶ್ರೀರಾಮನ ಕಥೆಯನ್ನು ಹೇಳುವರೋ ಅಲ್ಲೆಲ್ಲಾ ಅವನು ಬಂದು ಯಾವುದೋ ರೂಪದಲ್ಲಿ ನಿಂತು ಅದನ್ನು ಕೇಳಿ ಹೋಗುವನಂತೆ. ಮುಂದೆ ಶ್ರೀರಾಮನು ತನ್ನ ಅವತಾರವನ್ನು ಮುಗಿಸಲು ನಿರ್ಧರಿಸಿದನು. ತನ್ನ ಜೊತೆ ಬರುವವರನ್ನೆಲ್ಲ ಕರೆದನು. ಅವನ ಸಹೋದರರು, ಪ್ರೀತಿಯ ಕೆಲವು ಪ್ರಜೆಗಳು ರಾಮನೊಂದಿಗೆ ವೈಕುಂಠಕ್ಕೆ ಹೊರಟರು. ಆಂಜನೇಯನು ಶ್ರೀರಾಮನನ್ನು ಕ್ಷಣವೂ ಬಿಡದವನು! ಆದರೆ ಅವನು ಶ್ರೀರಾಮನೊಂದಿಗೆ ತನ್ನ ಜೀವನವನ್ನು ಮುಗಿಸಲು ಇಚ್ಛಿಸಲಿಲ್ಲ. ರಾಮನಿಗೂ ಆಶ್ಚರ್ಯ, ಅವನೂ ಹನುಮಂತನನ್ನು ಏಕೆ ಬರುವುದಿಲ್ಲ ಎಂದು ಕೇಳಿದನು. ಅದಕ್ಕೆ ಹನುಮಂತನು, "ಅಂದು ಚೂಡಾಮಣಿಯನ್ನು ತಂದುಕೊಟ್ಟಾಗ ನೀನು ಕಣ್ಣುತುಂಬಿಕೊಂಡು ನಿನಗೆ ಕೊಡಲು ನನ್ನ ಬಳಿ ಏನೂ ಇಲ್ಲ. ಬಾ ನಿನ್ನನ್ನು ಆಲಂಗಿಸಿಕೊಳ್ಳುವೆ ಎಂದು ನನ್ನನ್ನು ಅಪ್ಪಿಕೊಂಡೆ. ಶ್ರೀರಾಮನು ಅಪ್ಪಿಕೊಂಡ ಈ ದೇಹವನ್ನು ಅದೇ ನೆನಪಿನಲ್ಲಿ ಇಟ್ಟುಕೊಳ್ಳುತ್ತೇನೆ" ಎಂದನು. ನಮ್ಮ ಹನುಮಂತನಿಗೆ ಶ್ರೀರಾಮನಿಗಿಂತಲೂ ಅವನು ಮಾಡಿದ ಕೆಲಸಗಳ ನೆನಪು ಮುಖ್ಯ.

ಚಿರಂಜೀವಿ ಹನುಮಂತನು ಮುಂದೆ ಮಹಾಭಾರತ ಕಾಲದಲ್ಲೂ ಇದ್ದನು. ಹನುಮಂತನು ಭೀಮನಿಗೆ ಅವನಿಗಿದ್ದ ತನ್ನ ಶಕ್ತಿಯ ಅಹಂಕಾರವನ್ನೂ ಇಳಿಸಬೇಕೆಂದುಕೊಂಡನು. ಅದಕ್ಕಾಗಿ ಒಮ್ಮೆ ಭೀಮನು ಹಿಮಾಲಯದ ದಾರಿಯಲ್ಲಿ ಹೋಗುತ್ತಿರುವಾಗ ದಾರಿಗೆ ಅಡ್ಡಲಾಗಿ ತನ್ನ ಬಾಲವನ್ನು ಚಾಚಿ ಕುಳಿತುಕೊಂಡನು. ಭೀಮನು ಆ ಬಾಲವನ್ನು ಆಚೆ ಇಡಲು ನೋಡಿದರೆ ಒಂದು ಕೈಯಿಂದ ಸಾಧ್ಯವಾಗಲಿಲ್ಲ. ಎರಡು ಕೈಗಳ ಶಕ್ತಿಯೂ ಸಾಲದಾಯಿತು. ಆಗ ಭೀಮನಿಗೆ ಅನಿಸಿತು. ತನ್ನನ್ನು ಮೀರುವ ಶಕ್ತಿಶಾಲಿಗಳೂ ಇರುವರು, ಎಂದು. ಈ ಯೋಚನೆಯು ಅವನಿಗೆ ಯುದ್ಧ ಸಮಯದಲ್ಲಿ ಉಳಿದ ರಾಜರ ಸಹಾಯವನ್ನು ಕೋರಲು ಬೇಕಾಗಿರುವ ವಿನಯವನ್ನು ತಂದು ಕೊಟ್ಟಿತು.

ಹನುಮಂತನು ಯುದ್ಧ ಕಾಲದಲ್ಲಿ ಅರ್ಜುನನ ರಥದ ಮೇಲೆ ಧ್ವಜದ ಬುಡದಲ್ಲಿ ಕೂತು ಹದಿನೆಂಟು ದಿನಗಳ ಆ ಭಯಂಕರ ಕುರುಕ್ಷೇತ್ರ ಯುದ್ಧವನ್ನು ನೋಡಿದನು. ಒಳ್ಳೆಯ ವ್ಯಕ್ತಿಗಳಿಗಾಗಿ ಒಳಿತನ್ನು ಮಾಡುವವರು ಜೊತೆಗಿದ್ದರೆ ಸಾಕು, ಅವರಿಗೆ ಜಯ ನಿಶ್ಚಯ. ಅದೇ ರೀತಿ ಪಾಂಡವರು ಯುದ್ಧದಲ್ಲಿ ವಿಜಯಿಗಳಾದರು.

# ಶ್ರೀ ರಾಮಲಿಂಗೇಶ್ವರ ಸ್ವಾಮಿಯ ಆವಂತಿಕಾ ಕ್ಷೇತ್ರ

– **ಪಾರಿಜಾತ ಬಿ.ಎಸ್.,** ಬೆಂಗಳೂರು



ಎಲ್ಲಾ ಕಷ್ಟಗಳ ನಿವಾರಕನಾಗಿ, ಕಲ್ಪವೃಕ್ಷದಂತೆ ಇಷ್ಟಾರ್ಥಪ್ರದಾಯಕನಾಗಿ, ಮೂರುಲೋಕಕ್ಕೂ ಆನಂದದಾಯಕನಾಗಿ ಇರುವ ಶ್ರೀರಾಮಚಂದ್ರನೇ ನಮ್ಮೆಲ್ಲರನ್ನು ಮುನ್ನಡೆಸುವ ಪರಮಪ್ರಭು ಎಂಬುದು ನಿಸ್ಸಂಶಯವೆಂದು ಬುಧಕೌಶಿಕ ಋಷಿಗಳು ತಮ್ಮ ಶ್ರೀರಾಮರಕ್ಷಾಸ್ತೋತ್ರದಲ್ಲಿ ಹೇಳಿರುತ್ತಾರೆ. ಸೃಷ್ಟಿ ಕರ್ತನಾದ ಬ್ರಹ್ಮನು ಈ ಬ್ರಹ್ಮಾಂಡದಲ್ಲಿ ಸೃಷ್ಟಿಸಿದ ಪ್ರತಿಯೊಂದರ ಸ್ಥಿತಿಯನ್ನು ಕಾಪಾಡುವವನು ಭಗವಾನ್ ಶ್ರೀವಿಷ್ಣು. ಲಯಕರ್ತನಾದ ಮಹೇಶ್ವರನು ಉತ್ತಮ ಸದ್ಗತಿಯನ್ನು ದಯಪಾಲಿಸುವನು. ಅಂತೆಯೇ ಇದನ್ನು ಅರಿತಿರುವ ನಾವು ಹುಟ್ಟಿನಿಂದ ನಮ್ಮ ಅವಸಾನದವರೆಗೂ ಶ್ರೀವಿಷ್ಣು, ಮಹೇಶ್ವರರನ್ನು ವಿವಿಧ ರೂಪಗಳಲ್ಲಿ ಬಗೆಬಗೆಯ ರೀತಿಯಲ್ಲಿ ಪೂಜಿಸಿ ಅವರು ನೆಲೆಸಿದ ಪವಿತ್ರ ಕ್ಷೇತ್ರಗಳಲ್ಲಿ ಸೇವೆಯನ್ನು ಕೈಗೊಳ್ಳುತ್ತೇವೆ. ಶ್ರೀವಿಷ್ಣುವಿನ ಅವತಾರಗಳಲ್ಲಿ ಒಂದಾದ ರಾಮಾವತಾರವಾದ ತ್ರೇತಾಯುಗದಲ್ಲಿ ಶ್ರೀರಾಮ ಸೀತೆಯರಿಂದಲೇ ಪ್ರತಿಷ್ಠಾಪಿಸಲ್ಪಟ್ಟು ಪೂಜಿಸಲ್ಪಟ್ಟ, ಶ್ರೀರಾಮಲಿಂಗೇಶ್ವರಸ್ವಾಮಿ ದೇವಾಲಯವಿರುವ ಪವಿತ್ರ ಕ್ಷೇತ್ರಗಳಲ್ಲಿ ಒಂದು ಆವಂತಿಕಾ (ಆವನಿ)ಕ್ಷೇತ್ರ.

**"ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚಿ ಆವಂತಿಕಾ**
**ಪುರೀದ್ವಾರಾವತಿಚೈವ ಸಪ್ತೈತೇಮೋಕ್ಷದಾಯಕಾಃ"**

ನಮ್ಮ ಭಾರತದ ಈ ಪ್ರಮುಖ ಏಳು ಮೋಕ್ಷ ಸ್ಥಾನಗಳಲ್ಲಿ ಈ (ಆವನಿ)ಆವಂತಿಕಾ ಕ್ಷೇತ್ರವು ಒಂದೆನಿಸಿದೆ. ಇದು ಕರ್ನಾಟಕ ರಾಜ್ಯದ ಕೊಲಾರ ಜಿಲ್ಲೆಯ ಮುಳುಬಾಗಿಲು ತಾಲ್ಲೂಕಿಗೆ ಸೇರಿದೆ. ಬೆಂಗಳೂರಿನಿಂದ ಸುಮಾರು 72 ಕಿ.ಮೀ. ಹಾಗೂ ಕೋಲಾರದಿಂದ 32 ಕಿ.ಮೀ. ದೂರದಲ್ಲಿದೆ.

**ಸ್ಥಳಪುರಾಣ:** ಶ್ರೀನಾರದ ಮಹರ್ಷಿಗಳಿಗೆ ಚತುರ್ಮುಖ ಬ್ರಹ್ಮನು ಬ್ರಹ್ಮಾಂಡ ಪುರಾಣದಲ್ಲಿ (ಶತಕವಾಟಪುರಿ) ಹೇಳಿದ ಮುಳುಬಾಗಿಲ ಮಹತ್ಮೆಯಲ್ಲಿ ಆವಂತೀಕ್ಷೇತ್ರದ ವಿವರಣೆಯಿದೆ.

ಇಲ್ಲಿ ಸಾಕ್ಷಾತ್ ಶ್ರೀರಾಮನೇ ಶಿವನನ್ನು ಪ್ರತಿಷ್ಠಾಪಿಸಿ ಪೂಜಿಸಿದ್ದು, ತ್ರೇತಾಯುಗದಲ್ಲಿ ಉತ್ತರ ರಾಮಾಯಣದ ಕರ್ಮಭೂಮಿಯಾಗಿ, "ವಾಲ್ಮೀಕಾಶ್ರಮ" ಎನಿಸಿ ಪ್ರಸಿದ್ಧವಾಗಿರುವ ಕ್ಷೇತ್ರವಾಗಿದೆ. ಆದರ್ಶ ಪುರುಷ ಶ್ರೀರಾಮನು ರಜಕನ ನಿಂದನೆಗೆ ಒಳಗಾದ ತನ್ನ ಪೂರ್ಣಗರ್ಭಿಣಿಯಾದ ಪತ್ನಿ ಸೀತೆಯನ್ನು ವನವಾಸಕ್ಕೆ ತಮ್ಮ ಲಕ್ಷ್ಮಣನೊಂದಿಗೆ ಕಳುಹಿಸಿದನು. ನಂತರ ಸೀತಾಮಾತೆಯನ್ನು ಲಕ್ಷ್ಮಣನು ವಾಲ್ಮೀಕಿಯ ಆಶ್ರಮದಲ್ಲಿ



ಆಶ್ರಯಕ್ಕಾಗಿ ಬಿಟ್ಟು ಬರಲು ಅಲ್ಲಿ ಲವಕುಶರ ಜನನವಾಯಿತು. ಆ ಪವಿತ್ರ ಕ್ಷೇತ್ರವೇ ಈ ಆವಂತಿಕಾ ಕ್ಷೇತ್ರವಾಗಿದೆ. ನಂತರದ ಕಾಲದಲ್ಲಿ ಶ್ರೀರಾಮನು ಆಶ್ವಮೇಧಯಾಗವನ್ನು ಕೈಗೊಂಡು, ತಂದೆಯ ಆಶ್ವವೆಂದು ಅರಿಯದ ಲವಕುಶರು ಅದನ್ನು ತಡೆದು ಬೆಟ್ಟದ ಒಂದು ಕಲ್ಲು ಗುಂಡಿಗೆ ಕಟ್ಟಿ ಯುದ್ಧಕ್ಕೆ ನಿಲ್ಲಲು, ಈ ಪುಟ್ಟ ಬಾಲಕರ ಪೂರ್ವಾಪರ ತಿಳಿಯದ ರಾಮನ ಪರಿವಾರ ಅವರೊಂದಿಗೆ ಕಾದು ಸೋತರು. ಕೊನೆಗೆ ರಾಮನೇ ಯುದ್ದಕ್ಕೆ ಬರಲು ವಿಷಯ ತಿಳಿದ ವಾಲ್ಮೀಕಿ ಮಹರ್ಷಿಯು ಸತ್ಯಾಂಶವನ್ನು ತಿಳಿಸಲು, ಶ್ರೀರಾಮನು ತನ್ನ ಪರಿವಾರದೊಂದಿಗೆ ಪತ್ನಿ ಪುತ್ರರ ಸಮೇತ ಈ ಸ್ಥಳದಲ್ಲಿ ನೂರು ಲಿಂಗಗಳನ್ನು ಪ್ರತಿಷ್ಠಾಪಿಸಿ ಪೂಜಿಸಿದನಂತೆ. ಈ ಘಟನೆಗೆ ಇಂದಿಗೂ ಇಲ್ಲಿರುವ ಅನೇಕ ದೇವಾಲಯಗಳು ಸಾಕ್ಷಿಯಾಗಿವೆ. ಸೀತಾದೇವಿಯು ಇಲ್ಲಿ ನೆಲೆಸಿದ್ದಳೆಂಬುದಕ್ಕೆ ಆಕೆಯು ಪೂಜಿಸುತ್ತಿದ್ದ ಪಾರ್ವತಿ ದೇವಾಲಯ, ಅಗ್ನಿತೀರ್ಥ, ಹೊರಳುಗುಂಡು, ಲವಕುಶರು ಕುದುರೆ ಕಟ್ಟದ್ದ ಕುದುರೆ ಗುಂಡು, ವಾಲ್ಮೀಕಾಶ್ರಮ, ಅನೇಕ ಗುಹೆಗಳು, ರಾಮಸೀತೆಯರು ಪ್ರತಿಷ್ಠಾಪಿಸಿ ಪೂಜಿಸಿದ ಶ್ರೀರಾಮಲಿಂಗೇಶ್ವರ ದೇವಾಲಯ ಇತ್ಯಾದಿಗಳು ಇಲ್ಲಿ ಸಾಕ್ಷಿಯಾಗಿವೆ.

**ಐತಿಹಾಸಿಕ ಹಿನ್ನೆಲೆ:** ಗಂಗರು, ಪಲ್ಲವರು,ಚೋಳರು, ವಿಜಯನಗರದ ಅರಸರ ಕಾಲದಲ್ಲಿ ಈ ಕ್ಷೇತ್ರವು ಪ್ರಗತಿ ಕಂಡಿದ್ದು ಅನೇಕ ದೇವಾಲಯಗಳು, ಕೆರೆಕುಂಟೆಗಳ ನಿರ್ಮಾಣದ ಕಾರ್ಯಗಳನ್ನು ಕೈಗೊಂಡ  ಬಗ್ಗೆ ಅನೇಕ ಐತಿಹಾಸಿಕ ಶಾಸನಗಳು ವೀರಗಲ್ಲುಗಳು ಇಲ್ಲಿ ದೊರೆತಿವೆ.

ಹತ್ತನೇ ಶತಮಾನದಲ್ಲಿ ರುದ್ರಾಭಟ್ಟಾರಕರೆಂಬ ತಪಸ್ವಿಗಳು ಇಲ್ಲಿ ಮಹಾತ್ರೇತಾಗ್ನಿಗಳಲ್ಲೇ ಶ್ರೇಷ್ಠವಾದ ಆಹವನೀಯವೆಂಬ ಯಾಗವನ್ನು ಕೈಗೊಂಡ ಪ್ರಯುಕ್ತ ಈಸ್ಥಳಕ್ಕೆ ಅಹವನೀಯವೆಂದು ಕೂಡಾ ಕರೆಯಲಾಗಿದೆ. ನಂತರದ ದಿನಗಳಲ್ಲಿ ಅದು ಆವನಿಯೆಂದೆನಿಸಿದೆ.

**ಇಲ್ಲಿನ ಪ್ರಮುಖ ದೇವಾಲಯಗಳು:**

**ಶ್ರೀರಾಮೇಶ್ವರ ದೇವಾಲಯ:** ಈ ದೇವಾಲಯವು ಸುಂದರ ಹಾಗು ಭವ್ಯವಾಗಿದ್ದು, ಸುಂದರ ಕೆತ್ತನೆಯ ಕಂಬಗಳನ್ನೊಳಗೊಂಡಿದೆ. ಭವ್ಯವಾದ ಗೋಪುರ ಹೊಂದಿರುವ ಈ ದೇವಾಲಯದ ಗರ್ಭಗುಡಿಯಲ್ಲಿ ಶ್ರೀರಾಮಚಂದ್ರರಿಂದ ಪ್ರತಿಷ್ಠಾಪಿಸಲ್ಪಟ್ಟ ಲಿಂಗ ರೂಪಿಯಾದ ಶ್ರೀರಾಮಲಿಂಗೇಶ್ವರ ಸ್ವಾಮಿಯು ವಿರಾಜಿಸಿದ್ದಾನೆ. ಇಲ್ಲಿ ಸಪ್ತ ಮಾತೃಕೆಯರು, ಚಂಡಿಕೇಶ್ವರ ವಿಗ್ರಹವು ಹಾಗು ಸುಖನಾಶಿಯಲ್ಲಿ ಕಾಮಾಕ್ಷಿಯ ವಿಗ್ರಹವು  ಇದೆ.

**ಸೀತಾಪಾರ್ವತಿ ದೇವಾಲಯ:** ಶ್ರೀರಾಮಲಿಂಗೇಶ್ವರ ದೇವಾಲಯದ ಪೂರ್ವಕ್ಕೆ ಈ ದೇವಾಲಯವಿದೆ. ಸುಂದರ ಕಂಬಗಳ ಮುಖದ್ವಾರ, ವಿಶಾಲವಾದ ನವರಂಗದಲ್ಲಿ ಬಸದಿ, ನಂದಿಯಳವಂಜಿರಾಯ, ವಾಸುದೇವರಾಯರ ವಿಗ್ರಹಗಳು, ಸೂರ್ಯದೇವನ ವಿಗ್ರಹಗಳು ಇಲ್ಲಿವೆ. ಗರ್ಭಗುಡಿಯಲ್ಲಿನ ಪಾರ್ವತಿಯ ವಿಗ್ರಹವು ಮನೋಹರವಾಗಿದೆ. ಇಲ್ಲಿ ಮಾತೆ ಸೀತೆಯು ಪಾರ್ವತಿದೇವಿಯನ್ನು ಪ್ರತಿನಿತ್ಯವೂ ಪೂಜಿಸುತ್ತಿದ್ದಳೆಂದು ಸ್ಥಳಪುರಾಣವು ತಿಳಿಸುತ್ತದೆ.

**ಶ್ರೀಲಕ್ಷ್ಮಣೇಶ್ವರ ಸ್ವಾಮಿ ದೇವಾಲಯ:** ದಕ್ಷಿಣದಿಂದ ಉತ್ತರಕ್ಕೆ ಮೂರು ದೇವಾಲಯಗಳಿದ್ದು ಅವುಗಳಲ್ಲಿ ಶ್ರೀಲಕ್ಷ್ಮಣೇಶ್ವರ ದೇವಾಲಯವು ಒಂದಾಗಿದೆ. ಸುಂದರ ಶಿಲ್ಪಕಲೆಗಳಿಂದ ಕೂಡಿದ್ದು, ಗರ್ಭಗುಡಿಯಲ್ಲಿ ಲಕ್ಷ್ಮಣನು ಪ್ರತಿಷ್ಠಾಪಿಸಿದ ದೊಡ್ಡದಾದ ಲಿಂಗವಿದ್ದು ಇಲ್ಲಿನ ಎಲ್ಲಾ ದೇವಾಲಯಗಳಲ್ಲಿನ ವಿಗ್ರಹಗಳಿಗಿಂತ ದೊಡ್ಡದಾಗಿದೆ.

**ಶ್ರೀಭರತೇಶ್ವರ ದೇವಾಲಯ:** ಚಿಕ್ಕದಾದ ನವರಂಗ, ಚಾವಣಿಯಲ್ಲಿ ಅಷ್ಟದಿಕ್ಪಾಲಕರು, ಮುಂಭಾಗದಲ್ಲಿ ನಂದಿ ವಿಗ್ರಹ ಹೊಂದಿದ್ದು, ಗರ್ಭಗುಡಿಯಲ್ಲಿ ಚಿಕ್ಕದಾದ ಭರತೇಶ್ವರ ಸ್ವಾಮಿಯ ವಿಗ್ರಹವಿದೆ.

**ಇತರ ದೇವಾಲಯಗಳು:** ಹನುಮಂತನಿಂದ ಪ್ರತಿಷ್ಠಾಪಿಸಲ್ಪಟ್ಟ ಹನುಮಂತೇಶ್ವರ ದೇವಾಲಯ, ಮಹಾಗಣಪತಿ ದೇವಾಲಯ, ಅಂಗದೇಶ್ವರ ಮತ್ತು ಸುಗ್ರೀವೇಶ್ವರ ದೇವಾಲಯ, ಕಾಮಾಕ್ಷಿ ದೇವಾಲಯ ಇತ್ಯಾದಿ.

**ಇಲ್ಲಿನ ಇತರ ಪ್ರಮುಖ ಸ್ಥಳಗಳು:** ವಾಲ್ಮೀಕಪರ್ವತ ಗುಡ್ಡದ ಮೇಲಿನ ವಾಲ್ಮೀಕಾಶ್ರಮ, ಲವಕುಶರ ಜನ್ಮಸ್ಥಳವಾದ ಗುಹೆ; ಇಲ್ಲಿನ ಆಶ್ರಮದಲ್ಲಿ ಸೀತಾದೇವಿಯು ಆಶ್ರಯ ಪಡೆದಿದ್ದು, ಪಕ್ಕದ ಗುಹೆಯಲ್ಲಿ ಲವಕುಶರಿಗೆ ಜನ್ಮ ನೀಡಿದಳಂತೆ. ಇಲ್ಲಿಗೆ ಬರುವ ಭಕ್ತರು ಸಂತಾನಾಪೇಕ್ಷೆಯಿಂದ ಚೂರು ಕಲ್ಲುಗಳನ್ನು ಜೋಡಿಸಿ ಗೋಪುರದಂತೆ ಮಾಡಿ ಹರಕೆ ಹೊರುತ್ತಾರಂತೆ.






**ಪಂಚಪಾಂಡವರ ಗುಡಿ:** ದ್ವಾಪರ ಯುಗದಲ್ಲಿ ಇಲ್ಲಿಗೆ ಪಾಂಡವರು ಭೇಟಿ ನೀಡಿದ್ದು ಇಲ್ಲಿನ ದೇವಾಲಯವನ್ನು ನಿರ್ಮಿಸಿದ್ದಾರೆಂದು ತಿಳಿದು ಬಂದಿದೆ.

**ತೊಟ್ಟಿಲ ಗುಂಡು:** ಗುಡ್ಡದ ಮೇಲೆ ಬೃಹದಾಕಾರದ ಬಂಡೆಗಳು ಇದ್ದು, ಇಲ್ಲಿಂದ ಸೀತಾಮಾತೆಯು ರಾಮ ಲವಕುಶರು ನಡೆಸಿದ ಕಾಳಗವನ್ನು ವೀಕ್ಷಿಸಿದಳೆಂದು ನಂಬಿಕೆ ಇದೆ.

ಲವಕಶರ ಗುಡಿ, ಏಕಾಂತ ರಾಮಸ್ವಾಮಿಯ ದೇವಾಲಯ, ಧನಷ್ಕೋಟಿ, ಹೊರಳುಗುಂಡು, ಅಗ್ನಿತೀರ್ಥ, ಕುದುರೆಗುಂಡು, ಆವನಿ ಶೃಂಗೇರಿ ಶಂಕರಚಾರ್ಯಮಠ, ಅಂತರಗಂಗೆ ಇತ್ಯಾದಿ ಪ್ರಮುಖವಾದವು. ಹೀಗೆ ಬೆಟ್ಟದ ತಪ್ಪಲಿನಲ್ಲಿರುವ ವಿಶಾಲವಾದ ಪ್ರದೇಶದಲ್ಲಿ ಅನೇಕ ದೇವಾಲಯಗಳಿದ್ದು, ಬಾಣನ ಶಾಸನದಲ್ಲೂ ಈ ಕ್ಷೇತ್ರದ ಬಗ್ಗೆ ವಿಶ್ಲೇಷಣೆ ಇದ್ದು ನಂತರದ ಕಾಲದ ಶಾಸನದಲ್ಲಿ "ದಕ್ಷಿಣಗಯಾ" ಎನಿಸಿದೆ.

**ಇಲ್ಲಿನ ಉತ್ಸವಗಳು, ವಿಶೇಷ ಪೂಜೆಗಳು:** ಮಹಾಶಿವರಾತ್ರಿಯ ಕಾಲದಲ್ಲಿ ಹತ್ತುದಿನಗಳ ಕಾಲ ಜಾತ್ರೆಯ ಬ್ರಹ್ಮರಥೋತ್ಸವವು ನೆರವೇರುತ್ತದೆ.

**ಯಾತ್ರಿಕರಿಗೆ ವಿಶೇಷ ಮಾಹಿತಿ:**

* ಇಲ್ಲಿಗೆ ಕೆ.ಎಸ್.ಆರ್.ಟಿ.ಸಿ ಹಾಗೂ ಖಾಸಗಿ ವಾಹನಗಳ ವ್ಯವಸ್ಥೆ ಇದೆ.
* ಮಠದ ಮೂಲಕ ಸ್ಥಳ ವಿಶೇಷತೆಯನ್ನು ತಿಳಿಯ ಬಹುದಾಗಿದೆ.
* ಇಲ್ಲಿಗೆ ಕೂಡುಮಲೆ ಗಣಪ, ಮುಳುಬಾಗಿಲು, ಕೋಲಾರ, ಅಂತರಗಂಗೆ, ಬಂಗಾರ ತಿರುಪತಿ, ಕೋಟಿಲಿಂಗೇಶ್ವರ ಇತ್ಯಾದಿ ಸಮೀಪದ ಪ್ರೇಕ್ಷಣೀಯ ಸ್ಥಳಗಳು.

# ರಾಮ ಬಂದ ನಮ್ಮ ರಾಮ ಬಂದನೇ

– ಶಾರದಾ ವಿ. ಮೂರ್ತಿ
ಮೈಕೋ ಬಡಾವಣೆ, ಬೆಂಗಳೂರು

"ಚಂದನ್ ಹೈ ಇಸ್ ದೇಶ್ ಕೀ ಮಾಟಿ. ಬಚ್ಚಾ ಬಚ್ಚಾ ರಾಮ್ ಹೈ" ಎಂಬಂತೆ ಮಕ್ಕಳೆಲ್ಲರಲ್ಲೂ ಶ್ರೀರಾಮನನ್ನು ಕಾಣುವವರು ನಾವು.

ಈಗಂತೂ ದೇಶ–ವಿದೇಶಗಳಲ್ಲಿ ರಾಮಭಕ್ತರ ಮೈಮನಗಳಲ್ಲಿ ಸಾರ್ಥಕ್ಯ ಭಾವ ಮೂಡಿದೆ. ಐನೂರು ವರ್ಷಗಳ ಕನಸು ಸಾಕಾರಗೊಂಡು ಅಯೋಧ್ಯೆಯಲ್ಲಿ ಬಾಲರಾಮನು ವಿರಾಜಮಾನವಾಗಿದ್ದಾನೆ. ಪ್ರತ್ಯಕ್ಷ ನೋಡಲು ಈ ಕಂಗಳು ಹಾತೊರೆಯುತ್ತಿವೆ.

ಇದೀಗ ನಾವು ಮಾಡಿದ ಅಕ್ಷತೆಯ ಅಭಿಯಾನದ ಸಡಗರವನ್ನು ಒಂದಿಷ್ಟು ಹಂಚಿಕೊಳ್ಳುವ ಇಚ್ಛೆ. ನಮ್ಮಲ್ಲಿ ಅನೇಕರಿಗೆ ಇಂತಹ ಅಥವಾ ಮತ್ತೂ ಸ್ವಾರಸ್ಯದ ಅನುಭವಗಳಾಗಿರಬಹುದು.

ಪ್ರಸ್ತುತ ಸಂದರ್ಭದಲ್ಲಿ ಮನೆಯಲ್ಲೇ ನಾವು ಮಾಡುವ ಸಮಾರಂಭಗಳಿಗೂ ಎಲ್ಲರ ಮನೆಗಳಿಗೆ ಹೋಗಿ ಮುಖತಃ ಮಾತನಾಡಿ ಕೈಗೆ ಅಕ್ಷತೆ ಕೊಟ್ಟು ಕರೆಯುವುದಂತೂ ಬಹಳ ಕಡಿಮೆಯೆ! ಮದುವೆ, ಗೃಹಪ್ರವೇಶ, ಉಪನಯನದಂತಹ ಸಮಾರಂಭಗಳಿಗೆ ಫೋನ್‌ನಲ್ಲಿ ಸಂದೇಶ, ಆಹ್ವಾನ ಪತ್ರಿಕೆಯ ಫೋಟೋ ಹಾಗೂ ಪ್ರತ್ಯಕ್ಷ ಬರಲಾಗದುದಕ್ಕೆ ಬೇಸರಿಸದೆ ಖಂಡಿತ ಬರಬೇಕಾಗಿ ವಿನಂತಿಸಿಕೊಂಡ ಒಂದೆರಡು ಸಾಲುಗಳ ಪತ್ರದ ಫೋಟೋ ಕಳುಹಿಸುವುದೇ ರೂಢಿಗೆ ಬಂದಿದೆ.

ಆದರೆ ಈ ಅಕ್ಷತೆಯ ಅಭಿಯಾನದ ಸ್ವಾರಸ್ಯ, ಅಕ್ಷತೆಯ ಸಂಚಾರ, ಅದರ ಪಾವಿತ್ರ್ಯ, ಪರಿಣಾಮಗಳಂತೂ ಅನೂಹ್ಯವಾಗಿದ್ದವು. ಅಯೋಧ್ಯೆಯಲ್ಲಿ ಹಿಂದಿನ ಬಾಲರಾಮನೆದುರಿನಲ್ಲಿ ವಿಧಿವಿಧಾನಗಳ ಪ್ರಕಾರ ಕಲೆಸಿದ ಅಕ್ಷತೆಯನ್ನು ದೇಶದ ಉದ್ದಗಲಕ್ಕೂ ಪ್ರತಿಯೊಂದು ಪ್ರಾಂತ್ಯ, ಊರು, ಹಳ್ಳಿಗಳ ಎಲ್ಲರ ಮನೆಗೂ ತಲುಪಿಸುವ ಆಶಯ, ಸಂಕಲ್ಪ, ಗುರಿ. ಹೌದು; ಅಯೋಧ್ಯೆಯ ರಾಮ ಎಲ್ಲರಿಗೆ ಸೇರಿದವನು. 'ಅವ ನಮ್ಮವ'; ಮಂದಿರ ನಿರ್ಮಾಣದಲ್ಲಿ ಮಾನಸಿಕವಾಗಿಯಾದರೂ ಎಲ್ಲರ ಭಾಗವಹಿಸುವಿಕೆ ಆಗುವಂತೆ ಭಾವನೆಗಳ ಮಹಾಪೂರವನ್ನೇ ಹರಿಸಿತ್ತು ಈ ಅಕ್ಷತೆ. ಮೊದಲೇ ನಿಶ್ಚಯವಾದಂತೆ ಎಲ್ಲಾ ಪ್ರಾಂತದ ಪ್ರತಿಯೊಂದು ಊರಿನ ಕೆಲವು ದೇವಾಲಯಗಳಿಗೆ ಬಂದ ಅಕ್ಷತೆಯನ್ನು ಪೂರ್ಣಕುಂಭ ಸ್ವಾಗತ ಮಾಡಿಕೊಂಡು ಅಲ್ಲಿ ಪೂಜೆ, ಅರ್ಚನೆಯ ಸಡಗರ. ಅಲ್ಲಿಂದ ಊರಿನ ಎಲ್ಲಾ ವಸತಿಗಳಿಗೂ ತಲುಪುವಂತೆ ಹತ್ತಿರದ ಮತ್ತಷ್ಟು ಮಂದಿರಗಳಿಗೆ ಅಕ್ಷತೆಯ ಪಯಣ. ಕಳಶದೊಂದಿಗೆ ಮಹಿಳೆಯರು; ರಾಮ ಮಂತ್ರವ ಜಪಿಸುತ್ತಾ, ಭಜನೆ ಹಾಡುತ್ತಾ ಅಕ್ಷತೆಯನ್ನು ಬರಮಾಡಿಕೊಳ್ಳುವ ಆಯಾ ವಸತಿಯ ಜನರು. ದೇವರ ಮುಂದೆ ಕುಂಭದಲ್ಲಿರುವ ಅಕ್ಷತೆಗೆ ಅರ್ಚಕರಿಂದ ಸಾಂಗೋಪಾಂಗ ಪೂಜೆ...

ಮುಂದೆ ಅಭಿಯಾನದ ಮತ್ತೊಂದು ಹಂತ. ಪ್ರತಿಯೊಂದು ಬಡಾವಣೆಯಲ್ಲೂ ಅಕ್ಷತೆ ಹಂಚಲು ಸಿದ್ಧರಿರುವವರು ಅಲ್ಲಿ ಅಕ್ಷತೆ ಇಟ್ಟಿರುವ ಸ್ಥಳೀಯ ಮಂದಿರದಲ್ಲಿ ಸೇರಿ ನಿಗದಿತ ಸಮಯದಲ್ಲಿ ಲಕೋಟೆಗೆ ಅಕ್ಷತೆ ತುಂಬಿಸುವುದು; ಆಯಾ ವಸತಿಗಳಲ್ಲಿರುವ ಮನೆಗಳಿಗೆ ಬೇಕಾಗುವಷ್ಟು ಲಕೋಟೆಗಳು, ಹೀಗೊಂದು ಐದಾರು ದಿನ ಅಕ್ಷತೆ ತುಂಬಿಸುವ ಕಾರ್ಯ. ಪರಸ್ಪರ ನಗು, ಮಾತುಕತೆ, ಭಜನೆ, ತಮಾಷೆ, ದೇವರ ಮಂಗಳಾರತಿ, ಪ್ರಸಾದ ಸ್ವೀಕರಿಸಿ ಮನೆಯತ್ತ ಬರುತ್ತಿದ್ದೆವು.

ಜನವರಿ ಒಂದರಿಂದ ಅಕ್ಷತೆ ಹಂಚುವ ಕಾರ್ಯಕ್ರಮ, ಹೀಗೆ ಮನೆಮನೆಗಳಿಗೆ ಅಕ್ಷತೆ ಹಂಚಲು ಹೋದರೆ ಜನರು ಹೇಗೆ ಪ್ರತಿಕ್ರಿಯಿಸುತ್ತಾರೋ ಎಂಬ ತುಸು ಆತಂಕವಿದ್ದೇ ಇತ್ತು. ಟಿ.ವಿ.ಯಲ್ಲಿ, ಫೋನ್ ಸಂದೇಶಗಳಲ್ಲಿ, ಪತ್ರಿಕೆಗಳಲ್ಲಿ ಈ ಬಗ್ಗೆ ಸುದ್ದಿ ಪ್ರಸಾರವಾಗುತ್ತಲೇ ಇದ್ದವು. ಎಲ್ಲರಿಗೂ ಈಗಾಗಲೇ ವಿಷಯ ಗೊತ್ತಿರುತ್ತದೆ ಎಂಬ ನಂಬಿಕೆ ಇದ್ದೇ ಇತ್ತು.

ನಾವು ಯಾವ ಸಮಯದಲ್ಲಿ ಹೋದರೆ ಒಳ್ಳೆಯದು? ಬೆಳಿಗ್ಗೆ ಹೋದರೆ ಕೆಲಸದ ಒತ್ತಡ. ಮಧ್ಯಾಹ್ನ ಊಟ ಮಾಡಿ ನಿದ್ದೆ ಮಾಡಿರುವವರಿಗೆ ಎಬ್ಬಿಸಿದಂತಾಗುತ್ತದೆ. ಕರೆಗಂಟೆ ಒತ್ತಿದರೆ ನಮ್ಮನ್ನು ಶಪಿಸುತ್ತಾ ಎದ್ದು ಬರಬಹುದೇನೋ! ನಾವು ರಾಮನ ಕೆಲಸಕ್ಕಾಗಿ ಹೋಗುತ್ತಿರುವುದಲ್ಲ!... ಶಾಪದ ಪರಿಣಾಮವೇನೂ ನಮಗಾಗದು.

ಸಂಜೆ ಅನೇಕರು ವಾಕಿಂಗ್ ಎಂದು ಹೋಗುತ್ತಾರಲ್ಲ.. ಪ್ರತಿಯೊಬ್ಬರಿಗೂ ಅವರವರದೇ ದಿನಚರಿ ಇದ್ದೇ ಇರುತ್ತದಲ್ಲ... ಕೊನೆಗೆ ನಮಗೆ ಪ್ರಶಸ್ತವೆನಿಸಿದ ಸಮಯದಲ್ಲಿ ಶುಭಾರಂಭ ಮಾಡಿದೆವು.

ಬೇರೆ ಬೇರೆ ತಂಡಗಳು; ಮೂರು–ನಾಲ್ಕು ಜನರು ಒಟ್ಟಾಗಿ ಹೊರಟೆವು. ನಮ್ಮೊಂದಿಗೆ ಹೊರಟ ವಯೋವೃದ್ಧರಾದ ಶ್ರೀ ವೆಂಕಟರಮಣಯ್ಯನವರದ್ದು ಅದೇನು ಉತ್ಸಾಹ, ಅದೇನು ಲವಲವಿಕೆ...

ಹೀಗೆ ಮನೆಗಳಿಗೆ ಹೋದಾಗ ಗೇಟು ತೆಗೆಯುವುದೋ, ಸದ್ದು ಮಾಡುವುದೋ ಎಂದು ಯೋಚಿಸುವಷ್ಟರಲ್ಲಿಯೇ ಆ ವೃದ್ಧರು ಗೇಟು ತೆರೆದು, ಕರೆಗಂಟೆ ಒತ್ತಿ, ಬಾಗಿಲು ಬಡಿದು ಅಮ್ಮಾ... ಸರ್...ಎಂದು ಜೋರು ಕಂಠದಲ್ಲಿ ಕೂಗಿಯಾಗಿರುತ್ತಿತ್ತು. ಅವರ ಕಿವಿ ತುಸು ಮಂದವಾಗಿರುವುದರಿಂದ ಅವರಿಗೆ ತುಸು ಗಟ್ಟಿಯಾಗಿ ಮಾತನಾಡಿಯೇ ಅಭ್ಯಾಸ.

ಮನೆಯವರು ಬರುವುದು ತುಸು ತಡವಾದರೂ ಮತ್ತೊಮ್ಮೆ ಕರೆಗಂಟೆಯಾಗುತ್ತಿತ್ತು. ಮನೆಯವರು ಒಳಗಿನಿಂದ ಯಾವ ಮುಖಭಾವದಿಂದ ಬರುತ್ತಾರೋ ಎಂಬ ಸಂಕೋಚದಿಂದ ಮುದುಡಿಕೊಂಡಿದ್ದರೆ ಅವರು ಅಂತಹ ಯೋಚನೆಗಳಿಗೇ ಎಡೆಕೊಡದೆ ಅವರು ಬರುತ್ತಿದ್ದಂತೆ ಅಕ್ಷತೆಯ ವಿಚಾರವಾಗಿ ಅವರಿಗೆ ಅರ್ಥವಾಗುವಂತೆ ಹೇಳುತ್ತಿದ್ದರು. ಕೇಳುವವರಿಗೂ ಅವರ ಭಕ್ತಿಯ, ಶ್ರದ್ಧೆಯ ಅರಿವಾಗಿ ನಸುನಕ್ಕು, ನಂತರ ಭಕ್ತಿಭಾವದಿಂದ ಅವರಿಗೆ ಕೈ ಜೋಡಿಸಿ ಅಕ್ಷತೆಯನ್ನೂ, ಫೋಟೋವನ್ನೂ ಸ್ವೀಕರಿಸುತ್ತಿದ್ದರು.

ನಾವು ಬಂದುದನ್ನು ನೋಡಿ ಕೆಲವರು ಅನುಮಾನಿಸಿ ಹುಬ್ಬುಗಂಟಿಕ್ಕಿದರೆ, "ನಾವೇನೂ ಹಣ ಕೇಳೋಕೆ ಬಂದಿಲ್ಲ, ಅಯೋಧ್ಯೆಯ ಅಕ್ಷತೆ ತಂದಿದ್ದೀವಿ." ಎಂದು ಹೇಳುತ್ತಲೇ

ಆ ಮನೆಯವರ ಮುಖಭಾವ ನಿರಾಳವಾಗುತ್ತಿತ್ತು. ಅಪರಿಚಿತರಾದ ನಮ್ಮನ್ನು ಒಳಗೆ ಕರೆದು ಕೆಲವರಂತೂ ಅದೆಷ್ಟು ಭಕ್ತಿಯಿಂದ ಸ್ವೀಕರಿಸುತ್ತಾ, – 'ಪವಿತ್ರ ಅಕ್ಷತೆಯನ್ನು ನಮ್ಮ ಮನೆಗೇ ತಂದುಕೊಟ್ಟಿದ್ದೀರಲ್ಲ... ಕೂತ್ಕೊಳ್ಳಿ... ಹಾಲು ಕುಡಿದುಕೊಂಡು ಹೋಗಿ' ಎಂದು ಆತ್ಮೀಯವಾಗಿ ಉಪಚರಿಸುತ್ತಿದ್ದರು. ಹೌದು.... ಖಂಡಿತವಾಗಿಯೂ ಇದು ರಾಮನ ಬಗೆಗಿನ ಶ್ರದ್ಧೆ, ಭಕ್ತಿಯಲ್ಲದೆ ಮತ್ತೇನು!

"ನೀವು ಹಾಲು, ಕಾಫಿ ಅಂತ ತಂದು ಕೊಡ್ತೀರಿ... ನಾವು ಅದನ್ನು ಕುಡಿಯುತ್ತಾ ಕುಳಿತುಕೊಂಡರೆ ಎಲ್ಲರ ಮನೆಗೆ ಅಕ್ಷತೆ ತಲುಪಿಸುವುದು ಬೇಡವೆ?" ಎಂದು ತುಸು ಗಡುಸಾಗಿಯೇ ಹೇಳಿದ ವೆಂಕಟಪ್ಪನವರ ಇಂಗಿತ ಮನೆಯವರಿಗೆ ಅರ್ಥವಾಗುತ್ತಿತ್ತು.

"ನೀವು ಯಾವ ದೇವರನ್ನಾದರೂ ನಂಬಿ... ತೊಂದರೆಯಿಲ್ಲ – ನಾವು ಕೊಡುವ ಅಕ್ಷತೆಯನ್ನು ದೇವರ ಮುಂದೆ ಇಟ್ಟುಬಿಡಿ. ದೇಶದಲ್ಲಿ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಕೇಳಿಕೊಳ್ಳಿ. ಅಲ್ಲಿ ರಾಮನ ಪ್ರತಿಷ್ಠೆ ಆಗುವ ದಿನ ಎಲ್ಲರೂ ತಲೆಯ ಮೇಲೆ ಹಾಕಿಕೊಳ್ಳಿ. ಉಳಿದಿದ್ದನ್ನು ಸಿಹಿ ಮಾಡಿ ತಿನ್ನಿ ಆ ದಿನ ಸಂಜೆ ಕನಿಷ್ಠ ಐದು ದೀಪಗಳನ್ನು ಹೊತ್ತಿಸಿ, ರಾಮ ಭಜನೆ, ಪ್ರಾರ್ಥನೆ ಮಾಡಿ. ಆ ದಿನ ರಾಮನ ಮಂದಿರಕ್ಕೆ ಬನ್ನಿ." ಹೀಗೆ ಹೇಳಿ ಹೇಳಿ ಅವರಿಗೆ ಆ ಮಾತುಗಳು ಕಂಠಸ್ಥವಾಗಿಬಿಟ್ಟಿದ್ದವು. ರಾಮನ ಕಾರ್ಯ ಮಾಡುವ ಇಂತಹ ಸದವಕಾಶಕ್ಕಾಗಿ ಅವರಿಗಂತೂ ಧನ್ಯತಾ ಭಾವ ಉಂಟಾಗಿತ್ತು.

ಹೆಚ್ಚಾಗಿ ವಯಸ್ಸಾದವರಿದ್ದರೆ ತುಸುವೂ ಅನುಮಾನಿಸದೆ ಬಾಗಿಲು ತೆರೆದು ಒಳಗೆ ಕರೆದಾಗ ನಮಗೇ ಗಲಿಬಿಲಿಯಾಗುತ್ತಿತ್ತು. ಹೀಗೊಂದು ಮನೆಯಲ್ಲಿ ಎಂಬತ್ತು ದಾಟಿದ ಪತಿ–ಪತ್ನಿಯರು. ಪತಿ ಆಸರೆಯಿಂದ ನಡೆಯುತ್ತಿದ್ದರೂ ಮುಖದಲ್ಲಿ ಉತ್ಸಾಹಕ್ಕೇನೂ ಕಡಿಮೆಯಿರಲಿಲ್ಲ. ಅವರ ಇಬ್ಬರು ಮಕ್ಕಳೂ ವಿದೇಶದಲ್ಲಿದ್ದಾರಂತೆ. ಬೆಳಗಿನಿಂದ ಸಂಜೆಯವರೆಗೆ ಎಲ್ಲಾ ಸಹಾಯ ಮಾಡಲು ಒಬ್ಬರು ಬರುತ್ತಾರಂತೆ. ಮಕ್ಕಳು ವೀಡಿಯೋ ಕರೆಯ ಮೂಲಕ ದಿನವೂ ವಿಚಾರಿಸಿಕೊಳ್ಳುತ್ತಾರಂತೆ. ಒಂದೆರಡು ನಿಮಿಷಗಳಲ್ಲೇ ವಿಷಯವನ್ನೆಲ್ಲಾ ಹೇಳಿಕೊಂಡಿದ್ದರು. ನಮಗೆ ಅರಿಶಿನ–ಕುಂಕುಮವೆಂದಾಗ ಕುಳಿತು ಹಣ್ಣಿನೊಂದಿಗೆ ಸ್ವೀಕರಿಸಿ, ಅವರಿಗೆ ನಮಸ್ಕರಿಸಿ ಹೊರಟಿದ್ದೆವು. ಈ ಅಕ್ಷತೆಯ ಅಭಿಯಾನ ಎಷ್ಟೋ ಮನೆಗಳ ಅಂತರಂಗವನ್ನು ಅರುಹುವಂತಿತ್ತು.

ಮತ್ತೊಂದು ಮನೆಗೆ ಹೋದಾಗ ಹಿಂದಿನ ನೆನಪುಗಳೆಲ್ಲಾ ಸುರುಳಿ ಬಿಚ್ಚಿಕೊಂಡಿದ್ದವು. ಆ ಮನೆಯವರ ಮಗ ತನ್ನ ಹದಿನೆಂಟರ ಪ್ರಾಯದಲ್ಲಿ ಹಿಂದೆ ಕರಸೇವೆಗೆಂದು ಅಯೋಧ್ಯೆಗೆ ಹೋಗಿದ್ದ. ಅವನು ಹಿಂತಿರುಗಿ ಬರಲು ಬಹಳ ವಿಳಂಬವಾದದ್ದು, ಕೊನೆಗೆ ಸುರಕ್ಷಿತವಾಗಿ ಹಿಂತಿರುಗಿದ ಮೇಲೆ ನಾವೆಲ್ಲರೂ ನಿರಾಳವಾಗಿ ಉಸಿರಾಡಿದ್ದು ಎಲ್ಲವೂ ನೆನಪಾಗಿತ್ತು. ಆ ಯುವಕನ ಅಮ್ಮ ಬಾಗಿಲು ತೆಗೆದಾಗ ಪರಿಚಯದ ನಗು ನಕ್ಕು, "ಚೆನ್ನಾಗಿದ್ದೀರಾ?" ಎಂದು ಪ್ರಶ್ನಿಸಿದ್ದೇ, "ನೋಡಿದರೆ ಕಾಣಿಸೋಲ್ಲವಾ?" ಎಂದು ಧಡಕ್ಕನೆ ಬಾಗಿಲು ಹಾಕಿಕೊಂಡವರು ಮತ್ತೆ ತೆಗೆಯಲೇ ಇಲ್ಲ. ಇದೂ ಒಂದು ವಿಶೇಷ ಅನುಭವ ಎಂದುಕೊಂಡು ಮುನ್ನಡೆದಿದ್ದೆವು.

ಮುಂದಿನದು ಮೂರು ನಿವೇಶನಗಳನ್ನು ಸೇರಿಸಿ ಕಟ್ಟಿದ ದೊಡ್ಡ ಬಂಗಲೆ, ಗೇಟಿನಲ್ಲಿ "ನಾಯಿ ಇದೆ... ಎಚ್ಚರಿಕೆ.." ಫಲಕ.

ವೆಂಕಟರಮಣಯ್ಯನವರ ಗಡಸು ಸದ್ದನ್ನೂ ಮೀರಿ ನಾಯಿ ಬೊಗಳತೊಡಗಿತ್ತು. ಕೊನೆಯಲ್ಲಿ ಮೊದಲನೆಯ ಮಹಡಿಯ ಮನೆಯ ಬಾಗಿಲು ತೆರೆದು ಮಧ್ಯ ವಯಸ್ಸಿನ ಮಹಿಳೆಯೊಬ್ಬರು ಪ್ರಶ್ನಾರ್ಥಕ ನೋಟ ಬೀರಿದಾಗ, "ಅಯೋಧ್ಯೆಯ ಅಕ್ಷತೆ", ಎಂದು ಹೇಳಿದ್ದೆವು. ಆ ಕೂಡಲೇ ಸರಸರನೆ ಕೆಳಗೆ ಬಂದರು, ನಾಯಿಯನ್ನು ಹಿಡಿದುಕೊಂಡರೆ ನಾಯಿ ಬಾಲ ಅಲ್ಲಾಡಿಸುತ್ತಾ, ನಮ್ಮತ್ತ ನೋಟ ಹರಿಸುತ್ತಾ ಸಾಧುವಾಗಿ ಮೌನವಾಗಿದ್ದುದನ್ನು ನೋಡಿದರೆ ಅಚ್ಚರಿಯಾಗಿತ್ತು. ಆಕೆ ಗೇಟ್ ತೆರೆದು, ಭಕ್ತಿ ಭಾವದಿಂದ ಅಕ್ಷತೆಯನ್ನು ಸ್ವೀಕರಿಸಿದರು. ನಮ್ಮ ಕಾರ್ಯವನ್ನು ಶ್ಲಾಘಿಸುತ್ತಾ ಧನ್ಯವಾದ ಹೇಳಿದರು.

ನಾವು ಹೊರಡುತ್ತಿದ್ದಂತೆ ನಾಯಿಯೂ ಗೇಟ್ ದಾಟಿ ಹೊರಗೆ ಬಂದಿತ್ತು. ನಾವು ಗಾಬರಿಗೊಂಡಾಗ, ಮನೆಯಾಕೆ, "ತೊಂದರೆಯಿಲ್ಲ... ಅದು ಓಡಾಡಿಕೊಂಡು ಬರುತ್ತದೆ..." ಎಂದು ಹೇಳುತ್ತಾ ಒಳಗೆ ಹೋಗಿಬಿಟ್ಟರು.



ನಾವಿನ್ನೂ ಎರಡು ಹೆಜ್ಜೆ ದಾಟುತ್ತಿದ್ದಂತೆ 'ಅಭ್ಯಾಸ ಬಲ'ದಿಂದೆಂಬಂತೆ ನಾಯಿ ಮನೆಯ ಮುಂದಿನ ಮರಕ್ಕೆ ಮೂತ್ರ ಸಿಂಚನ ಮಾಡಿ ಪವಿತ್ರಗೊಳಿಸಿತ್ತು. ಸ್ವಲ್ಪದರಲ್ಲೇ ನಾವು ಪ್ರೋಕ್ಷಣೆಯಿಂದ ಪಾರಾಗಿದ್ದುದು ಸಮಾಧಾನದ ಸಂಗತಿ.

ಮುಂದಿನ ದಿನಗಳಲ್ಲಿ ನಡೆದ ಅಭಿಯಾನದಲ್ಲಿ ಕೇಳಿ ಬಂದ ಕೆಲವು ಸಂಭಾಷಣೆಗಳನ್ನು ಹಂಚಿಕೊಳ್ಳಬಹುದೆನಿಸುತ್ತದೆ.

"ನಾವು ಕೊಡಗಿನವರು; ದೇಶಭಕ್ತರು... ರಾಮಭಕ್ತರು.. ಎಂದೋ ಆಗಬೇಕಾಗಿದ್ದ ಮಂದಿರ... ಈಗಾದರೂ ಆ ಭಾಗ್ಯ ಬಂದೊದಗಿತಲ್ಲ."

"ಅಕ್ಷತೆಗಾಗಿ ಕಾಯುತ್ತಿದ್ದೆವು. ಗುಜರಾತಿನಲ್ಲಿರೋ ಅಣ್ಣನಿಗೆ ಮೊನ್ನೆಯೇ ಸಿಕ್ಕಿದೆಯಂತೆ."

"ಈ ವರ್ಷ ಅಕ್ಷತೆ ಸ್ವೀಕಾರ... ಮುಂದಿನ ವರ್ಷ ಪೂರ್ಣವಾಗಿರೋ ಅಯೋಧ್ಯೆಯ ಮಂದಿರ ನೋಡುವುದು ನಮ್ಮ ಕನಸು."

"ಶಿಲ್ಪಿ ಯೋಗಿರಾಜ್ ಯಾರು ಅಂತೀರಾ... ನಮ್ಮ ಚಿಕ್ಕಪ್ಪನ ಅತ್ತಿಗೆಯ ನಾದಿನಿಯ ಮನೆಯ ಹತ್ತಿರವೇ ಅವರು ಇರೋದು."

"ಊರಿನಲ್ಲಿ ನಮ್ಮ ಅಣ್ಣ ಎಲ್ಲಾ ಅಕ್ಷತೆ ಹಂಚುತ್ತಾ ಇದ್ದಾರೆ, ನನ್ಗೆ ಇಲ್ಲಿ ನಿಮ್ಮೊಂದಿಗೆ ಸೇರಿಕೊಳ್ಳೋಕೆ ಆಗಲೇ ಇಲ್ಲ. ನಮ್ಮ ಮನೆಗೆ ಬಂದು ತಲುಪಿಸಿದ್ದಕ್ಕೆ ಧನ್ಯವಾದಗಳು"

"ನಾವು ಯಾವಾಗಲೂ ಮೋಂಬತ್ತಿ ಹೊತ್ತಿಸುವುದು.... ಪರವಾಗಿಲ್ಲ... ಅಂದು ಸಂಜೆ ಐದು ದೀಪ ಬೆಳಗ್ತೀವಿ.

"ನೀವು ನಮ್ಮ ಆಫೀಸಿಗೆ ಬಂದಿದ್ದೀರಿ. ನಿಮ್ಮ ಭಾವನೆಯನ್ನು ನಾವು ಗೌರವಿಸ್ತೀವಿ. ನಾವಿಲ್ಲಿ ಇಬ್ಬರು ಮುಸ್ಲಿಮರು ಒಬ್ಬರು ಕ್ರಿಶ್ಚಿಯನ್ ಇರೋದು... ಇನ್ನೆಲ್ಲರೂ ಮನೆಯಿಂದಲೇ ಕೆಲಸ ಮಾಡ್ತಾರೆ... ನೀವು ಕೊಟ್ಟ ಈ ಪವಿತ್ರ ಅಕ್ಷತೆ ಎಲ್ಲೋ ಬಿದ್ದು ಹಾಳಾಗಬಾರದು ಅನ್ನೋದು ನನ್ನ ಅನಿಸಿಕೆ... ದಯವಿಟ್ಟು ತಪ್ಪು ತಿಳೀಬೇಡಿ..."

"ನಮಗೆ ನಮ್ಮ ಏಸುವೂ ಒಂದೇ... ರಾಮನೂ ಒಂದೇ! ಮಂದಿರಕ್ಕೆ ನಮ್ಮದೂ ಬೆಂಬಲವಿದೆ. ನಮಗೂ ಅಕ್ಷತೆ ಕೊಡಿ;"

ಹೀಗೆ ನಾವು ಊಹಿಸದೇ ಇದ್ದ ಪ್ರೋತ್ಸಾಹದ ಮಾತುಗಳು, ರಾಮ ಮಹಿಮೆಯೇ ಹೌದು. ಹಣ ಕೇಳಲು ಬಂದಿಲ್ಲವೆಂದರೂ ಕೇಳಿಸಿಕೊಳ್ಳದೆ ಬಾಗಿಲು ಹಾಕಿಕೊಂಡವರು ಒಂದಿಬ್ಬರು.

ಬಾಗಿಲು ತೆರೆದುಕೊಂಡಿದ್ದರೂ ಜೋರಾಗಿ ಕರೆದಾಗಲೂ ಹೊರಗೆ ಬಾರದ ಒಂದೆರಡು ಮನೆಗಳು ಹಾಗೂ ಪಿ.ಜಿ.ಗಳು. ಯಾರನ್ನೂ ಒಳಗೆ ಬಿಡುವಂತಿಲ್ಲವೆಂದು ವಸತಿ ಸಮುಚ್ಚಯದವರು ಅಸಹಾಯಕತೆ ವ್ಯಕ್ತಪಡಿಸಿ ಅವರಿಗೆಲ್ಲರಿಗೂ ತಾವೇ ತಲುಪಿಸುವುದಾಗಿ ಹೇಳಿ ಅಕ್ಷತೆ ಸ್ವೀಕರಿಸಿದ ಸೆಕ್ಯುರಿಟಿಯವರು.

ಅಕ್ಷತೆಯ ಬಗ್ಗೆ ನಮ್ಮ ಮಾತು ಕೇಳಿಸಿಕೊಂಡು, ಫೋನ್‌ನ ಫೇಸ್‌ಬುಕ್‌ನಲ್ಲಿ ಅಕ್ಷತಾ ಅಭಿಯಾನದ ಬಗ್ಗೆ ತೆಲುಗಿನಲ್ಲಿ ಬರುತ್ತಿದ್ದ ವಿವರಣೆಯನ್ನು ನಮ್ಮ ಮುಂದೆ ಹಿಡಿದ ಬಿ.ಬಿ.ಎಂ.ಪಿ. ಸ್ವಚ್ಛತಾ ಕಾರ್ಮಿಕರು.

ಹೀಗೆ ರಾಮಕಾರ್ಯದೊಂದಿಗೆ ಸಾಕಷ್ಟು ವಿಭಿನ್ನ ಅನುಭವಗಳನ್ನು ಪಡೆದು ಜನವರಿ 22ಕ್ಕಾಗಿ ಬಹುನಿರೀಕ್ಷೆಯಿಂದ ಕಾಯುತ್ತಿದ್ದೆವು.

ಅಂದು ಕೋದಂಡರಾಮ ಮಂದಿರದಲ್ಲಿ ಭಜನೆ ಮಾಡುತ್ತಾ, ರಾಮನ ಪ್ರಾಣ ಪ್ರತಿಷ್ಠೆಯನ್ನು ನೋಡುವಾಗ ಎಲ್ಲರ ತನು, ಮನಗಳೂ ಹೇಳಲಾರದ ಭಾವನೆಗಳನ್ನು ತುಂಬಿಕೊಂಡು ಮೌನವಾಗಿ ನಮಸ್ಕರಿಸುತ್ತಿದ್ದವು.

ಆ ಬಾಲರಾಮನನ್ನು ಎಷ್ಟು ನೋಡಿದರೂ ಸಾಲದು. ಅವನು ಇನ್ನಿಲ್ಲಿ ಶಾಶ್ವತವಾಗಿರುವವನು. ನಮ್ಮೆಲ್ಲರ ರಾಮ ವಿಧ್ಯುಕ್ತವಾಗಿ ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಗೊಂಡಿದ್ದಾನೆ. ರಾಮಧ್ಯಾನ, ರಾಮ ಜಪ, ರಾಮ ಭಜನೆ, ರಾಮ ಪ್ರಾರ್ಥನೆ, ರಾಮ ರಕ್ಷಾ ಸ್ತೋತ್ರ, ರಾಮ ತಾರಕ ಮಂತ್ರ ಹೀಗೆ ಎಲ್ಲವೂ ಎಲ್ಲೆಲ್ಲಿಯೂ ಶ್ರೀರಾಮನೇ!

ಭಕ್ತಾನುಗ್ರಹನಾದ ಶ್ರೀರಾಮ ಎಲ್ಲಾ ಭಕ್ತರ ಶುದ್ಧ ಪ್ರೀತಿ, ವಾತ್ಸಲ್ಯ, ಶ್ರದ್ಧೆ ಎಲ್ಲವನ್ನೂ ಗಮನಿಸುತ್ತಾ ನಿಜರೂಪದಲ್ಲಿಯೇ ದರುಶನ ಕೊಟ್ಟಾನು! ಅಯೋಧ್ಯೆಗಂತೂ ಕರೆಸಿಕೊಂಡಾನು....

















ಕಂಗೊಳಿಸುವ ಬಾಲರಾಮನರಮನೆ

Regd. No. RNP/KA/BGS/636/2024-2026
Post at Bengaluru PSO 560 026 on 6/10 (of every month)
Licenced to Post without pre-payment
WPP No.: PMG/BG/WPP/338/2024-2026

Total Pages 44
RNI No. KARKAN/2002/08081
Date of Publication 01-02-2024




## ಮಾಧ್ಯಮಗಳೂ ರಾಮಮಯ

ಇಂದ

**ಹಿಂದುವಾಣಿ**
'ಧರ್ಮಶ್ರೀ',
91, ಶಂಕರಪುರ,
ಬೆಂಗಳೂರು – 560 004

# ಹಿಂದುವಾಣಿ

Printed and Published by N.P. Muniraju on behalf of and owned by
Vishwa Hindu Parishad and Printed at Rastrotthana Mudranalaya, No. 8 & 8/1, Sathyapramoda Teertha Building
3rd Main, 9th Cross, Chamarajapete, Bengaluru - 560 018, Karnataka.
Published at #91, Dharmashri, Shankarapuram, Bengaluru - 560 004 Karnataka. Editor T.A.P. Shenoy